
ಎಸ್. ಅಪ್ಪಾಸಾಹೇಬ ಬ. ಕಾಡಾಪೂರಕರ

S.Appasaheb B.Kadapurakar



ಪಿ. ಬಿ. ಗವಾನಿ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002
ದೂರವಾಣಿ : 080-22480297

Karnataka Lalitkala Academy
Kannada Bhavan, J.C. Road, Bengaluru - 560 002
Phone : 080 - 22480297
E-mail : kla.karnataka@gmail.com

ಎಸ್. ಅಪ್ಪಾಸಾಹೇಬ ಬ. ಕಾಡಾಪೂರಕರ
S. Appasaheb B. Kadapurakar

ಪಿ. ಬಿ. ಗವಾನಿ

P. B. Gavani


ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002
ದೂರವಾಣಿ : 080– 22480297
E-mail : kla.karnataka@gmail.com

S.Appasaheb B. Kadapurakar A Monograph written by **P.B. Gavani**
Published by **H. J. VijayaLakshmi**, Registrar, Karnataka Lalithakala Academy,
Kannada Bhavana, J.C.Road, Bengaluru-560 002 Ph: 080-22480297
E-mail : kla.karnataka@gmail.com

First Edition	:	2011
Pages	:	xii+60+20
Copies	:	1000
Price	:	Rs. 80/-
ಹಕ್ಕುಗಳು	:	ಕಾಯ್ದಿರಿಸಿದೆ
ಮುದ್ರಣ	:	2011
ಪುಟಗಳು	:	12+60+20
ಪ್ರತಿಗಳು	:	1000
ಬೆಲೆ	:	80/–
ಸಂಯೋಜನೆ	:	ಎಸ್. ಎಂ. ಜಂಬುಕೇಶ್ವರ
ಆಂಗ್ಲ ಅನುವಾದ	:	ಎನ್. ಬಿ. ಕಾವೇರಪ್ಪ
ಮುಖಪುಟ ಚಿತ್ರ	:	ಗಾಂಧೀಜಿ (ಕೋಲಾಜ್)
ಮುಖಪುಟ ವಿನ್ಯಾಸ	:	ಎಂ.ಎಸ್. ಮಂಜುನಾಥ

ಪ್ರಕಾಶಕರು
ಎಚ್. ಜಿ. ವಿಜಯಲಕ್ಷ್ಮಿ
ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002
ದೂರವಾಣಿ : 080– 22480297
E-mail : kla.karnataka@gmail.com

ಮುದ್ರಕರು
ರಶ್ಮಿ ಪ್ರಿಂಟರ್ಸ್
ನಂ.12ಬಿ, ಮೊದಲನೇ ಅಡ್ಡರಸ್ತೆ
ಕಲಾಸಿಪಾಳ್ಯ ಹೊಸಬಡಾವಣೆ
ಬೆಂಗಳೂರು–560 002
ದೂ : 22115815, 99019 16581



ಅಧ್ಯಕ್ಷರ ನುಡಿ

ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ಶೋಧನೆ-ಚಿಂತನೆಗಳನ್ನು ಸತ್ವಪೂರ್ಣವಾಗಿ ದಾಖಲಿಸುವ, ಓದುಗರ ಕಲಾ-ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ಕೆಲಸ ನಮ್ಮ ಅಕಾಡೆಮಿಯ ಮೂಲಕ ನಡೆಯುತ್ತಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮೂಲಕ ವಿತರಣಾ ಪ್ರಕ್ರಿಯೆಗಳನ್ನು ಅಕಾಡೆಮಿಯ 'ಕಲಾವಾರ್ತೆಯ' ಮೂಲಕ ಪ್ರಯತ್ನಿಸುತ್ತಿದೆ. ಈಗಾಗಲೇ ವೈವಿಧ್ಯಮಯ ಮತ್ತು ವೈಶಿಷ್ಟ್ಯಪೂರ್ಣ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಅಂತರಂಗ ಹಾಗೂ ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ ಎಂದು ಹೇಳಬಯಸಿದರೆ ಅತಿಶಯೋಕ್ತಿಯಾಗಲಾರದು.

ಕಲೆ ಎಲ್ಲರನ್ನು ಕೈಬೀಸಿ ಕರೆಯುತ್ತದೆ, ಆದರೆ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂಬ ಮಾತು ಚರ್ಚೆಯಲ್ಲಿ ಇದೆ. ಈ ಮಾತು ಕಲೆಯ ಮಹತ್ವ, ವ್ಯಾಪ್ತಿ ಹಾಗೂ ವೈಶಿಷ್ಟವನ್ನು ಅತ್ಯಂತ ಪರಿಣಾಮಕಾರಿಯಾಗಿ ಮತ್ತು ಶಕ್ತಿವತ್ತಾಗಿ ಅಭಿವ್ಯಕ್ತಿಸುತ್ತದೆ. ಒಂದರ್ಥದಲ್ಲಿ ಕಲೆ ತನ್ನ ಸತ್ವದ ಅಭಿವ್ಯಕ್ತಿಗಾಗಿ ಎಲ್ಲರನ್ನು ಆಹ್ವಾನಿಸಿದರೂ ಅದರ ಮೂಲ ತತ್ವವನ್ನು ಅರಿತು, ಅನುಭವಿಸಿ, ಧ್ಯಾನಿಸಿ, ಅನುಸಂಧಾನ ಮಾಡಿದ ನಂತರ ಅದರ ಆರಾಧನೆಯಲ್ಲಿ ತೊಡಗಿ ತಮ್ಮನ್ನು ಸಂಪೂರ್ಣವಾಗಿ ಅದಕ್ಕೆ ಅಂಟಿಕೊಂಡವರು ಬಹಳ ವಿರಳವೆಂದೇ ಹೇಳಬಹುದು. ಆದ್ದರಿಂದಲೆ ಕಲಾ ಕ್ಷೇತ್ರದಲ್ಲಿ ಪರಿಣಿತಿಯನ್ನು ಪಡೆಯುವವರು ಆ ಮೂಲಕ ವಿಭಿನ್ನ ಹಾಗೂ ವೈಶಿಷ್ಟ್ಯಪೂರ್ಣ ಕಲಾಕೃತಿಗಳನ್ನು ರಚಿಸುವವರ ಸಂಖ್ಯೆ ಕಡಿಮೆಯೆಂದೇ ತಿಳಿಯಬೇಕಾಗುತ್ತದೆ.

ಇಷ್ಟಾದರೂ ನಮ್ಮ ಪುರಾಣಗಳು, ಇತಿಹಾಸಗಳು, ಪುರಾತತ್ವ ದಾಖಲೆಗಳು ಭಾರತದಲ್ಲಿ ಅನಾದಿಕಾಲದಿಂದಲೂ; ಮಹತ್ವದ ಕಲಾಸಾಧಕರುಇದ್ದುದನ್ನು ಮತ್ತು ಅಪೂರ್ವ ಕಲಾಕೃತಿಗಳನ್ನು ರಚಿಸಿದ್ದನ್ನು ಸಾದರಪಡಿಸುತ್ತವೆ.ಆಧುನಿಕ ಭಾರತವೂ ಸಹ ಇಂಥಹ ಸಾಕಷ್ಟು ಕಲಾವಿದರನ್ನು ಸೃಷ್ಟಿಸಿದೆ. ಭಾರತೀಯ ಪಾರಂಪರಿಕ ಕಲೆಯ ಮಹೋನ್ನತಿಯನ್ನು ಮೈಗೂಡಿಸಿಕೊಳ್ಳುವುದರ ಜೊತೆಗೆ ಅನೇಕ ಕಾಲಘಟ್ಟಗಳಲ್ಲಿ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಮೈದೋರಿದ ಹೊಸ ಹೊಸ

ಕಲಾಪಂಥಗಳನ್ನು, ಚಿಂತನೆಗಳನ್ನು, ತಂತ್ರಮಾಧ್ಯಮಗಳನ್ನು ರೂಢಿಸಿಕೊಂಡು ಬಹು ಪ್ರಸಿದ್ಧಿಯನ್ನು ಪಡೆದ ಕಲಾವಿದರು ನಮ್ಮಲ್ಲಿ ಇರುವುದು ಅಭಿಮಾನಪಡುವಂಥದ್ದು. ಆದರೆ ಈ ಕಲಾವಿದರ ಜೀವನ ಮತ್ತು ಸಾಧನೆಗಳ ಬಗೆಗಿನ ವಿದ್ವತ್ ಹಾಗೂ ಅಧಿಕೃತ ದಾಖಲೆಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆಯದಿರುವುದು ವಿಷಾದದ ಸಂಗತಿ. ಮತ್ತೊಂದೆಡೆ ಈ ಕ್ಷೇತ್ರದ ಮಹಾಸಾಧಕರನ್ನು, ಅವರ ಸಿದ್ಧಿ ಸಾಧನೆಗಳನ್ನು ಜೀವನದ ಏರಿಳಿತಗಳನ್ನು ಮತ್ತು ಅನುಭವಿಸಿದ ಸಾಕಷ್ಟು ಸಂತೋಷಗಳನ್ನು ಪರಿಚಯಿಸುವ ಗ್ರಂಥಗಳು ಅತ್ಯಲ್ಪವೇ ಎಂದು ಹೇಳಬಹುದು.

ತಮ್ಮೆಲ್ಲರಿಗೂ ತಿಳಿದಿರುವಂತೆ ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿಶ್ವಭಾಷೆಯಾದ ದೃಶ್ಯಜ್ಞಾನವನ್ನು ಕನ್ನಡ ಭಾಷೆಯ ಮೂಲಕ ಪ್ರಚುರಗೊಳಿಸುವ ಕಾರ್ಯಕ್ರಮವನ್ನು ಚಟುವಟಿಕೆಗಳ ನಡುವೆಯೂ ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಕಲಾಚಿಂತಕರು, ದೃಶ್ಯಸಾಹಿತ್ಯದ ಬಗೆಗೆ ಕಳಕಳಿ ಉಳ್ಳವರೂ ಆಗಿರುವ ಶ್ರೀ ಪಿ.ಬಿ. ಗವಾನಿ ಅವರು ರಚಿಸಿದ. ಅಪ್ಪಾಸಾಹೇಬ ಬ. ಕಾಡಾಪೂರಕರ ಅವರ ಕೃತಿಯನ್ನು ಅಕಾಡೆಮಿಯು ಪ್ರಕಟಿಸಲು ಹೆಮ್ಮೆ ಪಡುತ್ತದೆ. ಕೆಲವೇ ಮಾತುಗಳಲ್ಲಿ ಕಲಾವಿದರ ಸಾಧನೆಗಳನ್ನು ಬಿಂಬಿಸುವ ಕೌಶಲ ಇಲ್ಲಿ ಸುವ್ಯಕ್ತವಾಗಿವೆ. ಲೇಖಕರು ಸರಳವಾಗಿ, ಎಲ್ಲರೂ ಪರಿಚಯ ಮಾಡಿಕೊಳ್ಳಲು ಅನುವುಮಾಡಿಕೊಟ್ಟಿದೆ. ಈ ಬರಹಗಳು ಕಲಾ ವಿದ್ಯಾರ್ಥಿಗಳಿಗೂ ಕಲಾಸಕ್ತರಿಗೂ ಬಹು ಉಪಯುಕ್ತವಾಗಿವೆ. ಇಂತಹ ವಿಶಿಷ್ಟ ಕೃತಿಯನ್ನು ಅಕಾಡೆಮಿಗೆ ಬರೆದುಕೊಟ್ಟ ಇವರಿಗೆ ನಮ್ಮ ಅಕಾಡೆಮಿಯ ಪರವಾಗಿ ಅಭಿನಂದನೆಗಳು ಸಲ್ಲುತ್ತವೆ.

– ನಾಡೋಜ ಡಾ. ಜೆ.ಎಸ್. ಖಂಡೇರಾವ್

ಲೇಖಕರ ಮಾತು

ಕಲಾವಿದನಿಗೆ ಅಭಿವ್ಯಕ್ತಿ ಎಂಬುದು ಸ್ವಯಂ ಪ್ರೇರಿತವಾಗಿ ಬರುವಂಥಹದ್ದು, ಇದಕ್ಕೆ ಮಾಧ್ಯಮ ಅಡ್ಡಿಯಾಗಲಾರದು ತನಗೆ ಸಿಕ್ಕ ಅವಕಾಶದಲ್ಲಿ ಮಾಧ್ಯಮದಲ್ಲಿ ಕಲಾವಿದ ತನ್ನ ಪ್ರತಿಭೆಯನ್ನು ತೋರಿಸುತ್ತಾನೆ. ಹೀಗೆ ಒಬ್ಬ ಕಲಾವಿದ ತನ್ನ ಪ್ರತಿಭೆಯಿಂದ ಯಶಸ್ಸು ಪಡೆಯುತ್ತಾನೆ. ಕೆಲವು ಕಲಾವಿದರು ಯಾವುದೇ ಪ್ರಶಸ್ತಿ ಜನಪ್ರಿಯತೆ ಬಯಸದೆ ತಮ್ಮ ಮನಸ್ಸಿನ ತೃಪ್ತಿಗಾಗಿ ಜನರ ಆನಂದಕ್ಕಾಗಿ ಕಲೆಯಲ್ಲಿ ಮಗ್ನರಾಗಿರುತ್ತಾರೆ. ಇಂಥ ಕಲಾವಿದರಿಗೆ ಅವರ ಪ್ರತಿಭೆಗೆ ತಕ್ಕ ಮಾನ ಸನ್ಮಾನಗಳು ಲಭಿಸುವಂತಾಗಬೇಕು. ಇಂಥ ಎಲೆ ಮರೆಯ ಕಾಯಿಯಂತಿರುವ ಕಲಾವಿದರ ಬಗ್ಗೆ ಗಂಭೀರ ಅಧ್ಯಯನಗಳು ಸಾಕಷ್ಟು ನಡೆಯಬೇಕು. ಹಾಗಾಗದೇ ಇದ್ದರೆ ಕೆಲವೇ ದಿನಗಳಲ್ಲಿ ಅವರು ಜನರ ಸ್ಮೃತಿಯಿಂದ ಮರೆಯಾಗುತ್ತಾರೆ. ಅವರ ಅಮೂಲ್ಯ ಕಲಾ ಕೃತಿಗಳು ಹಾಳಾಗಿ ಹೋಗುತ್ತವೆ. ಕರ್ನಾಟಕದಲ್ಲಿ ಆಗಿಹೋದ ಅನೇಕ ಹಿರಿಯ ಕಲಾವಿದರ ಬಗ್ಗೆ ಈಗ ಮಾಹಿತಿ ಸಿಗುವುದು ಕಷ್ಟವಾಗಿದೆ. ಅವರ ಕಲಾಕೃತಿಗಳು ಅಲ್ಲಲ್ಲಿ ಚದುರಿಹೋಗಿವೆ. ಅವುಗಳನ್ನೆಲ್ಲ ಸಂಶೋಧಿಸಿ ದಾಖಲಿಸುವ ಅಧ್ಯಯನಕ್ಕೊಳಪಡಿಸುವ ಕೆಲಸಗಳು ಇನ್ನೂ ತೀವ್ರಗತಿಯಲ್ಲಿ ಸಾಗಬೇಕಾಗಿದೆ. ಈ ದಿಸೆಯಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿ ಸಾಕಷ್ಟು ಕೆಲಸ ಮಾಡಿದೆ. "ಕಲಾವಿದರ ಮಾಲೆ" ಹೆಸರಿನಲ್ಲಿ ಅನೇಕ ಹಿರಿಯ ಕಲಾವಿದರ ಜೀವನ ಮತ್ತು ಕಲಾಕೃತಿಗಳ ಅಧ್ಯಯನವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಾ ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ. ಜೊತೆಗೆ ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದಲೂ ಕಲಾವಿದರ ಬಗ್ಗೆ ಸಾಕಷ್ಟು ಕಿರುಪ್ರಬಂಧಗಳು, ಎಂ.ಫೀಲ್ ಪ್ರಬಂಧಗಳು, ಪಿ.ಎಚ್.ಡಿ. ಮಹಾಪ್ರಬಂಧಗಳು ಹೊರಬರುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.

ಕಲಾವಿದರ ಮಾಲೆಯಲ್ಲಿ ಈ ವರ್ಷ ಬೆಳಗಾವಿ ಜಿಲ್ಲೆಯ ನಿಪ್ಪಾಣಿಯ ಹಿರಿಯ ಕಲಾವಿದರು ಎಸ್. ಅಪ್ಪಾಸಾಹೇಬ ಬ. ಕಾಡಾಪೂರಕರರವರ ಬಗ್ಗೆ


ಪುಸ್ತಕ ಬರೆಯಲು ನನಗೆ ಅವಕಾಶ ಮಾಡಿಕೊಟ್ಟ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ನಾಡೋಜ ಡಾ. ಜೆ. ಎಸ್. ಖಂಡೇರಾವ್‌ರವರಿಗೆ, ರಿಜಿಸ್ಟ್ರಾರ್ ಶ್ರೀಮತಿ ಎಚ್.ಜಿ. ವಿಜಯಲಕ್ಷ್ಮಿ ಅವರಿಗೆ ಪ್ರಕಟನಾ ಸಮಿತಿಗೆ ಹಾಗೂ ಅಕಾಡೆಮಿಯ ಎಲ್ಲ ಸದಸ್ಯರಿಗೆ ನನ್ನ ಕೃತಜ್ಞತೆಗಳು.

ಅಪ್ಪಾಸಾಹೇಬ ಬ. ಕಾಡಾಪೂರಕರರವರ ಮನೆಗೆ ಕ್ಷೇತ್ರಕಾರ್ಯಕ್ಕೆ ಸಾಕಷ್ಟು ಸಲ ಹೋದಾಗ ಬೇಸರ ಮಾಡಿಕೊಳ್ಳದೆ ನಾನು ಕೊಡುವ ತೊಂದರೆಯನ್ನು ಸಹಿಸಿಕೊಂಡು ಸಹಕರಿಸಿದ ಕಾಡಾಪೂರಕರರವರ ಕುಟುಂಬ ವರ್ಗದ ಎಲ್ಲ ಸದಸ್ಯರಿಗೆ, ನನ್ನ ಬರವಣಿಗೆಗೆ ಪ್ರೋತ್ಸಾಹಿಸಿ ಮಾರ್ಗದರ್ಶನ ಮಾಡಿದ ಡಾ. ಎಸ್. ಸಿ. ಪಾಟೀಲ, ಶ್ರೀ ಬಿ.ಎಂ.ಪಾಟೀಲ, ಶ್ರೀ ಶಂಕ್ರಪ್ಪ ಕುಂದಗೋಳ ಹಿರಿಯ ಕಲಾವಿದರಾದ ಶ್ರೀ ಎಂ. ಬಿ. ಪಾಟೀಲ, ಶ್ರೀ ವ್ಹಿ. ಬಿ. ಹಿರೇಗೌಡರ, ಶ್ರೀ ವಿವೇಕಾನಂದ ಕಲಾ ಮಂದಿರ, ರಾಯಬಾಗದ ಪ್ರಾಚಾರ್ಯರಾದ ಶ್ರೀ ವಿ. ಡಿ. ಸಾಲಿ ಹಾಗೂ ಸಿಬ್ಬಂದಿ ವರ್ಗದವರಿಗೆ, ಬರವಣಿಗೆಯಲ್ಲಿ ಸಹಕರಿಸಿದ ಬಾಳ ಸಂಗಾತಿ ಶ್ರೀದೇವಿ, ಮಗಳು ಸ್ವಾತಿಗೆ, ನನ್ನ ವಿದ್ಯಾರ್ಥಿ ವೃಂದಕ್ಕೆ, ಅನೇಕ ಮಿತ್ರರಿಗೆ ನನ್ನ ಕೃತಜ್ಞತೆಗಳು.

ನನ್ನ ಲೇಖನವನ್ನು ಇಂಗ್ಲೀಷ್‌ಗೆ ಅನುವಾದ ಮಾಡಿದ ಶ್ರೀ ಎನ್.ಬಿ. ಕಾವೇರಪ್ಪ ಅವರಿಗೆ, ಮುಖಪುಟ ವಿನ್ಯಾಸ ಮಾಡಿದ ಎಂ.ಎಸ್. ಮಂಜುನಾಥ ಅವರಿಗೆ ಹಾಗೂ ಚೆನ್ನಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ರಾಯಬಾಗ್.

– ಪಿ. ಬಿ. ಗವಾನಿ



ಪಿ. ಬಿ. ಗವಾನಿ

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಬಿರನಾಳ ಗ್ರಾಮದಲ್ಲಿ 22 ಜುಲೈ 1967ರಲ್ಲಿ ಜನಿಸಿದ ಪಿ. ಬಿ. ಗವಾನಿ ಅವರು ಚಿತ್ರಕಲಾ ಶಿಕ್ಷಣವನ್ನು ಬೆಂಗಳೂರಿನ ಕೆನ್ ಕಲಾ ಶಾಲೆಯಿಂದ ಆರ್ಟ್ ಮಾಸ್ಟರ್‌ನಲ್ಲಿ ರಾಜ್ಯಕ್ಕೆ ದ್ವಿತಿಯ ರ್‍ಯಾಂಕ್ ಗಳಿಸುವ ಮೂಲಕ ಪಡೆದರು. ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ "ಮಾಸ್ಟರ್ ಆಫ್ ವಿಜ್ಯುವಲ್ ಆರ್ಟ್"ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಜಹಾಂಗೀರ ಆರ್ಟ್ ಗ್ಯಾಲರಿ ಮುಂಬೈ, ಬೆಂಗಳೂರು, ಕೊಲ್ಹಾಪೂರ, ಪುಣೆ, ನವದೆಹಲಿ ಸೇರಿದಂತೆ ಇಲ್ಲಿಯವರೆಗೆ 11 ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಕೇರಳ, ನವದೆಹಲಿ, ಬೆಂಗಳೂರು, ನಾಗಪೂರ ಸೇರಿದಂತೆ 45ಕ್ಕೂ ಹೆಚ್ಚು ರಾಜ್ಯ ಹಾಗೂ ರಾಷ್ಟ್ರಮಟ್ಟದ ಗುಂಪು ಚಿತ್ರಕಲಾ ಪ್ರದರ್ಶನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿಲ್ಪಕಲಾ ಅಕಾಡೆಮಿ, ಲಲಿತಕಲಾ ಅಕಾಡೆಮಿ ಮುಂತಾದ ಸಂಘ ಸಂಸ್ಥೆಗಳು ಏರ್ಪಡಿಸಿದ 21ಕ್ಕೂ ಹೆಚ್ಚು ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಮಕ್ಕಳ ಮನಸ್ಸು ಹಾಗೂ ಸ್ತ್ರೀ ಸಂವೇದನೆ ಕುರಿತು ಸಾಕಷ್ಟು ಸರಣಿ ಚಿತ್ರಗಳು, ಅವರ ಅಭಿವ್ಯಕ್ತಿಯ ಅನನ್ಯತೆಯನ್ನು ಸೂಚಿಸುತ್ತವೆ. ಅಕ್ರೇಲಿಕ್ ಮತ್ತು ತೈಲವರ್ಣದಲ್ಲಿ ರಚಿಸಿದ ಅವರ ಅನೇಕ ಕೃತಿಗಳಲ್ಲಿ, ಪ್ರೀತಿ–ಪ್ರೇಮ ಸ್ತ್ರೀಯ ಒಂಟಿತನ, ಅವಳ ಮಕ್ಕಳ ಪ್ರೇಮ, ಮಕ್ಕಳಾಗದಿದ್ದ ಸಂದರ್ಭದಲ್ಲಿ ಅವಳ ವೇದನೆ, ಸಮಾಜದ ಕಿರುಕುಳ, ಒಟ್ಟಾರೆ ಸ್ತ್ರೀ ಸಂವೇದನೆಯನ್ನು ಸೂಚಿಸುವ ಅವರ ಸಾಕಷ್ಟು ಕಲಾಕೃತಿಗಳು ಸೃಜನಶೀಲತೆಯಿಂದ ಕೂಡಿವೆ. ಅವರ ಅಕ್ರೇಲಿಕ್ ಹಾಗೂ ವರ್ಣಚಿತ್ರಗಳಲ್ಲಿಯ ಬುರುಗು ಶೈಲಿ ಅವರದೇ ಆದ ವಿಶೇಷ ತಂತ್ರ ಶೈಲಿಯನ್ನು ಗುರುತಿಸಬಹುದು.

ಚಿತ್ರಕಲೆ ಕಲಾವಿದರ ಕುರಿತು ದೃಶ್ಯಕಲಾ ವಿಮರ್ಶೆ ಸೇರಿದಂತೆ 32ಕ್ಕೂ ಹೆಚ್ಚು ಲೇಖನಗಳು ಪ್ರಜಾವಾಣಿ, ಸುಧಾ, ಸಂಯುಕ್ತ ಕರ್ನಾಟಕ, ಕನ್ನಡಮ್ಮ, ಕನ್ನಡಪ್ರಭ, ಕಲಾವಾರ್ತೆ ಮುಂತಾದ ಪ್ರತಿಷ್ಠಿತ ದಿನಪತ್ರಿಕೆ ಹಾಗೂ ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ. ದೇಶದ ವಿವಿಧ ಭಾಗಗಳಲ್ಲಿ ನಡೆದ ರಾಜ್ಯ ಹಾಗೂ ರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ 11ಕ್ಕೂ ಹೆಚ್ಚು ಸಂಶೋಧನಾತ್ಮಕ ಪ್ರಬಂಧಗಳನ್ನು

ಮಂಡಿಸಿದ್ದಾರೆ. ಅಲ್ಲದೆ ಕಳೆದ 18 ವರ್ಷಗಳಿಂದ (1992) ಶ್ರೀ ವಿವೇಕಾನಂದ ಕಲಾ ಮಹಾವಿದ್ಯಾಲಯ ರಾಯಬಾಗ್‌ದಲ್ಲಿ ಉಪನ್ಯಾಸಕ ವೃತ್ತಿ ಮಾಡುತ್ತಾ ಅಂತಿಮ ವರ್ಷ ವಿಶೇಷ ಪರಿಣತಿ, ಬಿ.ವಿ.ಎ. ಹಾಗೂ ಎ.ಟಿ.ಸಿ. ವಿದ್ಯಾರ್ಥಿಗಳಿಗೆ 20 ಕ್ಕೂ ಹೆಚ್ಚು ಕಿರುಪ್ರಬಂಧಗಳಿಗೆ ಮಾರ್ಗದರ್ಶನ ಮಾಡಿದ್ದಾರೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿಯ, ಬಿ.ವಿ.ಎ. ಅಧ್ಯಯನ ಮಂಡಳಿ ಹಾಗೂ ಬಿ.ವಿ.ಎ. ಹಾಗೂ ಎ.ಟಿ.ಸಿ.ಯ ಪರೀಕ್ಷಾ ಮಂಡಳಿಯ (2008–2011) ಸದಸ್ಯರಾಗಿದ್ದಾರೆ. ಅಲ್ಲದೇ ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ರಾಜ್ಯ ಶಿಕ್ಷಕರ ಪ್ರತಿಭಾ ಪರಿಷತ್ತು ಬೆಂಗಳೂರು ಇದರ ಆಜೀವ ಸದಸ್ಯರಾಗಿದ್ದಾರೆ.

2007ರಲ್ಲಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ, 2008ರಲ್ಲಿ ರಾಜ್ಯಮಟ್ಟದ ಆದರ್ಶ ಉಪನ್ಯಾಸಕ ಪ್ರಶಸ್ತಿ, 2009ರಲ್ಲಿ ತಾಲ್ಲೂಕಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ, 2010ರಲ್ಲಿ ತೇಜರತ್ನ ಪ್ರಶಸ್ತಿ, 2011ರಲ್ಲಿ ಸತೀಶ್ ಶುಗರ್ತ ಪ್ರಶಸ್ತಿ, 2011ರಲ್ಲಿ ಸೇವಾರತ್ನ ಪ್ರಶಸ್ತಿ, ಸೇರಿದಂತೆ ಅನೇಕ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿದ್ದಾರೆ. ಇವರ ಕಲಾಕೃತಿಗಳು ಅಮೇರಿಕಾ, ನವದೆಹಲಿ, ಬೆಂಗಳೂರು ಸೇರಿದಂತೆ ದೇಶ ವಿದೇಶಗಳ ಅನೇಕ ಖಾಸಗಿ ಸಂಗ್ರಹಗಳಲ್ಲಿ ಸಂಗ್ರಹಗೊಂಡಿವೆ. ಹೀಗೆ ಚಿತ್ರಕಲೆಯನ್ನು ಒಂದು ತಪಸ್ಸು ಎಂದು ತಿಳಿದು ಪಿ. ಬಿ. ಗವಾನಿಯವರು ಕ್ರೀಯಾಶೀಲರಾಗಿ ಕೆಲಸಮಾಡುತ್ತಿದ್ದಾರೆ. ಸದ್ಯ ಕನ್ನಡ ವಿಶ್ವವಿದ್ಯಾಲಯದಿಂದ ಕರ್ನಾಟಕದ "ವಸ್ತುಸಂಗ್ರಹಾಲಯದಲ್ಲಿನ ಚಿತ್ರಕಲೆ" ಎಂಬ ವಿಷಯದ ಮೇಲೆ ಪಿ. ಎಚ್. ಡಿ. ಅಧ್ಯಯನ ಮಾಡುತ್ತಿದ್ದಾರೆ. ಪ್ರಸ್ತುತ ಗಡಿನಾಡು ಕಲಾವಿದ ಎಸ್. ಅಪ್ಪಾಸಾಹೇಬ ಬ. ಕಾಡಾಪೂರಕರರವರ ಬಗ್ಗೆ ಪುಸ್ತಕವನ್ನು ಅಕಾಡೆಮಿಗೆ ರಚಿಸಿಕೊಟ್ಟಿದ್ದಾರೆ.

– ಎಸ್.ಎಂ.ಜಂಬುಕೇಶ್ವರ



ಎಸ್. ಅಪ್ಪಾಸಾಹೇಬ ಬ. ಕಾಡಾಪೂರಕರ

S. Appasaheb B. Kadapurakar

ಎಸ್. ಅಪ್ಪಾಸಾಹೇಬ ಬ. ಕಾಡಾಪೂರಕರ

ಆಕಾರವು ಮಹಾನ್ ! ಆಕಾರವಿಲ್ಲವಾದರದು ಶೂನ್ಯ ! ಶೂನ್ಯದಿಂದ ಹೊರ ಹೊಮ್ಮಿ ಬಂದುದೆಲ್ಲ ಆಕಾರವೇ ! ಅದು ಬಾಹ್ಯಾಂತರ ವಿಶ್ವ, ಅದರಲ್ಲಿ ಸತ್ಯವಿದೆ, ಸೌಂದರ್ಯವಿದೆ, ಅದನ್ನು ಗ್ರಹಿಸಬಲ್ಲರೆ ಪರಮ ಶಾಂತಿಯ ಅನುಭವ ! ಅದು ಕಲೆಯ ಉದ್ದೇಶ, ಆ ಮಹಾನ್ ಆಕಾರವನ್ನಿಲ್ಲಿ ಗ್ರಹಿಸಲಾಗಿದೆ. ಬಣ್ಣ, ಬೆಳ್ಳಿ-ಬಂಗಾರ, ಕಲ್ಲು, ಕಟ್ಟಿಗೆ, ದವಸಧಾನ್ಯ ಇವೆಲ್ಲ ಇಲ್ಲಿನ ಮಾಧ್ಯಮಗಳು, ಮಾಡಿದ ಆಕೃತಿಗಳಲ್ಲಿ ವಿವಿಧ ತತ್ವಗಳು ಅಡಗಿವೆ. ಅವುಗಳನ್ನರಿತರೆ ವಿಶ್ವ ದರ್ಶನ ! ಈ ದರ್ಶನ ಮಾಡಿಸುವವರು ಶ್ರೀ ಅಪ್ಪಾಸಾಹೇಬ ಬ. ಕಾಡಾಪೂರಕರ. ವಂಶಪರಂಪರೆಯಿಂದಲೂ ಸರಿ, ಕಲೆ ಅವರ ಆರಾಧನೆ ಕಲಾಭಿಜ್ಞರ ಸಂತೋಷವೇ ಅವರಿಗೆ ದೊರೆವ "ಪ್ರತಿಫಲ" ಎಂದು ಪ.ಪೂ: ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, ಜ್ಞಾನಯೋಗಾಶ್ರಮ, ಬಿಜಾಪೂರ ಅವರು ಅಭಿಪ್ರಾಯ ಪಟ್ಟಂತೆ, ಅಪ್ಪಾಸಾಹೇಬರು ಕಲೆಯ ಎಲ್ಲ ಮಾಧ್ಯಮಗಳಲ್ಲಿ ಸಿದ್ಧಹಸ್ತರಾಗಿದ್ದಾರೆ.

ಕಲಾವಿದನಿಗೆ ಮಾಧ್ಯಮ ಯಾವುದೇ ಇರಲಿ "ಎಲ್ಲದರಲ್ಲಿ ಸ್ಕೇಚ್ ಮುಖ್ಯ. ಕಲ್ಲು, ಮಣ್ಣು, ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳೆ ಯಾವುದೇ ಮಾಧ್ಯಮವಿರಲಿ ಸ್ಕೇಚ್ ಮೊದಲು, ಬುನಾದಿ ಗಟ್ಟಿಮುಟ್ಟಾಗಿ ಇತ್ತೆಂದರೆ ಭದ್ರವಾಗಿ ಕಟ್ಟಿದ ಇಮಾರತ್ ನಿಲ್ಲುವುದು. ಇದು ಸ್ಕೇಚ್ ಮಹಿಮೆ ಎನ್ನುತ್ತಾರೆ. ಅಪ್ಪಾಸಾಹೇಬರು ಹೀಗಾಗಿ ಇವರು ಯಾವುದೇ ಮಾಧ್ಯಮದಲ್ಲಿ ಕೆಲಸ ಮಾಡಲು ಹಿಂಜರಿಯಲಿಲ್ಲ. ಚಿತ್ರಿಸಬೇಕಾಗಿರುವ ವಿಷಯಕ್ಕೆ ತಕ್ಕಂತೆ ಮೊದಲು ಸ್ಕೇಚ್ ತಯಾರಿಸಿಕೊಳ್ಳುತ್ತಿದ್ದರು. ಕೃತಿ ರಚನೆಯ ಪೂರ್ವದಲ್ಲಿ ಹೀಗೆ ಸಾಕಷ್ಟು

ರೇಖಾಚಿತ್ರಗಳನ್ನು ತಯಾರಿಸುವ ರೂಢಿಯನ್ನು ಇವರು ಇಟ್ಟುಕೊಂಡಿದ್ದರು. ರೇಖಾಚಿತ್ರ ರಚಿಸಲು ಯಾವುದೇ ಒಂದು ಮಾಧ್ಯಮಕ್ಕೆ ಅಂಟಿಕೊಳ್ಳಬಾರದು. “ಕೈಗೆ ಯಾವುದು ಸಿಗುವುದೋ ಆ ಮಾಧ್ಯಮದಿಂದ ಸ್ಕೇಚ್ ಮಾಡುತ್ತಾ ಹೋಗಬೇಕು. ಅಂದರೆ ಖಡು, ಕೊಳಸೆ, ಚಾರಕೋಲ್, ಸೀಸಪೆನ್ಸಿಲ್ ಹುಲಮಂಜ್ ಹೀಗೆ ಹಲವಾರು ಮಾಧ್ಯಮದಿಂದ ಸ್ಕೇಚ್ ಮಾಡುತ್ತಾ ಇರಬೇಕು” ಎಂದು ರೇಖಾಚಿತ್ರದ ಬಗ್ಗೆ ತಮ್ಮ ಅನುಭವದ ಮಾತನ್ನು ಹೇಳುತ್ತಾರೆ. ಸಾಧ್ಯಾಸಾಧ್ಯತೆ ವಿಚಾರ ಬಿಟ್ಟು ತನ್ನ ಅಭಿವ್ಯಕ್ತಿಯನ್ನು ರೇಖೆಗಳ ಮುಖಾಂತರ ಹೊರಹಾಕಬೇಕು. ಯಾವುದೇ ವಿಚಾರಗಳನ್ನು ತನ್ನಲ್ಲಿ ಅದುಮಿ ಇಡಬಾರದು. ತಪ್ಪೋ ಸರಿಯೋ ಸ್ಕೇಚ್‌ಗಳನ್ನು ಹಾಕ್ತಾ ಇರಬೇಕು. ಏಕೆಂದರೆ ‘ಸ್ಕೇಚ್ ಇದು ಬೊಡ್ಡೆ, ಆರ್ಟ್ ಪೇಂಟಿಂಗ್. ಶಿಲ್ಪ, ಕಾಸ್ಟಿಂಗ್, ಎಂಬಾಸಿಂಗ್ ಇನ್ನುಳಿದ ಎಲ್ಲವೂ ಟೊಂಗೆಗಳು ಮತ್ತು ಈ ಎಲ್ಲದರ ಹಿಂದೆ ಬೇರು ಎಂದರೆ ವಿಚಾರ. ರೇಖೆಗಳಿಗೆ ವಿಚಾರದ ಸ್ಪರ್ಶ ನೀಡಿ ಅಂತಿಮಗೊಳಿಸಿದರೆ ಉತ್ತಮ ಕಲಾಕೃತಿಯಾಗುತ್ತದೆ. ಅದುವೇ ಸಾರ್ಥಕ ರೂಪ ಎನ್ನಬಹುದು. ಇದನ್ನೆ ಕಾಡಾಪೂರಕರ ಅವರು ‘ಆಕಾರ ಮಹಾನ್’ ಎನ್ನುತ್ತಾರೆ.

ಅಪ್ಪಾಸಾಹೇಬರಿಗೆ ಈಗ 75 ವರ್ಷ. ಈ ಇಳಿ ವಯಸ್ಸಿನಲ್ಲಿಯೂ ತರುಣರನ್ನು ನಾಚಿಸುವ ಉತ್ಸಾಹ, ಆದಮ್ಯ ಚೈತನ್ಯವಿದೆ. ಅವರ ಇತ್ತೀಚಿನ ಸ್ಕೇಚ್‌ಗಳಲ್ಲಿ ಮಾಗಿದ ಅನುಭವವಿದೆ, ಆಧ್ಯಾತ್ಮದ ಸೆಳೆತವಿದೆ.

ಹೀಗೆ ಅಪ್ಪಾಸಾಹೇಬರು ವೈವಿಧ್ಯಮಯ ಮಾಧ್ಯಮಗಳಲ್ಲಿ ಕೆಲಸ ಮಾಡಲು ಪೂರ್ವ ತಯಾರಿಗಾಗಿ ಸಾಕಷ್ಟು ಕರಡು ಚಿತ್ರಗಳನ್ನು ರಚಿಸುತ್ತಿದ್ದರು. ತಮ್ಮ ಹತ್ತಿರ ಯಾವಾಗಲೂ ಒಂದು ಸ್ಕೇಚ್ ಬುಕ್ ಇಟ್ಟುಕೊಂಡು, ಆಗಾಗ ಅದರಲ್ಲಿ ಸ್ಕೇಚ್‌ಗಳನ್ನು ಹಾಕುವ ರೂಢಿಯನ್ನು ಇಟ್ಟುಕೊಂಡಿದ್ದರು.

ಕೋಲಾಜ್ ಕಲಾಕೃತಿಗಳು :

ನಿಪ್ಪಾಣಿಯ ಹಿರಿಯ ಕಲಾವಿದರಾದ ದಿವಂಗತ ವಾಲಚಂದ್ರ ಕೊಠಾಡಿಯಾ ಅವರು ಭಾವಚಿತ್ರ ರಚನೆಯಲ್ಲಿ ಅನೇಕ ತಂತ್ರಗಳನ್ನು ಬಳಸುತ್ತಿದ್ದರು. ಅದರಲ್ಲಿ ಧಾನ್ಯಗಳು, ಗೋಧಿ ಕಡ್ಡಿ ಮುಂತಾದ ವಸ್ತುಗಳನ್ನು ಕೋಲಾಜ್ ತಂತ್ರದಲ್ಲಿ ಅಂಟಿಸಿ ಕೃತಿ ರಚಿಸುತ್ತಿದ್ದರು. ಕಾಡಾಪೂರಕರ ಅವರು ವಾಲಚಂದ್ರ ಕೊಠಾಡಿಯಾ ಅವರನ್ನು ಗುರುಗಳಾಗಿ ಸ್ವೀಕರಿಸಿ ಅವರಿಂದ ಪ್ರಭಾವಿತರಾಗಿ ಕೋಲಾಜ್ ತಂತ್ರದಲ್ಲಿ ಸಾಕಷ್ಟು ಪ್ರಯೋಗಗಳನ್ನು ಮಾಡಿದ್ದಾರೆ.

ಅಪ್ಪಾಸಾಹೇಬರು ಕೋಲಾಜ್ ಮಾಧ್ಯಮದಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿದ ಅನೇಕ ಗಣ್ಯ ವ್ಯಕ್ತಿಗಳ ಭಾವಚಿತ್ರವನ್ನು ಗೋಧಿಕಡ್ಡಿ, ಖಾದಿ ಅರಿವೆ, ಕರಿಮಣಿಗಳು, ಧಾನ್ಯಗಳನ್ನು ಬಳಸಿಕೊಂಡು ರಚಿಸಿದ್ದಾರೆ. ಅವುಗಳ ವಿವರ ಈ ಕೆಳಗಿನಂತಿದೆ.

ಲತಾ ಮಂಗೇಶ್ಕರ :

"ಧಾನ್ಯ, ಧನ್ಯವಾಯಿತು, ಸುಟ್ಟು ಹೂವಾಯಿತು, ಜೀವನ ಕಲ್ಯಾಣವಾಯಿತು, ಹುಟ್ಟು ಮರಣದ ಕೊನೆಯಾಯಿತು" ಎಂಬ ಶೀರ್ಷಿಕೆಯ ಭಾವಚಿತ್ರ ಭಾರತರತ್ನ ಲತಾ ಮಂಗೇಶ್ಕರ ಅವರದು; ಸಂಪೂರ್ಣ ಕೃತಿಯನ್ನು ಧಾನ್ಯದಿಂದ ರಚಿಸಿದ್ದಾರೆ. ನೆರಳು ಬೆಳಕಿಗೆ ತಕ್ಕಂತೆ ವಿವಿಧ ನಮೂನೆಯ ಧಾನ್ಯಗಳನ್ನು ಬಳಸಿದ್ದಾರೆ. ವೃತ್ತಾಕಾರದಲ್ಲಿ ಈ ಭಾವಚಿತ್ರವನ್ನು ಸಂಯೋಜನೆ ಮಾಡಿದ್ದಾರೆ. ಸುತ್ತಲೂ ಹಿತ್ತಾಳೆಯ ಎಂಬಾಸಿಂಗ್ ಫ್ರೇಂ ಸ್ವತಃ ತಯಾರಿಸಿದ್ದಾರೆ. ಇದರಿಂದ ಕೃತಿ ಭವ್ಯವಾಗಿ ತೋರುತ್ತಿದೆ.

ಆಶಾ ಭೋಸಲೆ :

"ಪಾರದರ್ಶಕ" ಶೀರ್ಷಿಕೆಯ ಇನ್ನೊಂದು ಕೃತಿಯನ್ನು ಸಂಪೂರ್ಣವಾಗಿ ಕರಿಮಣಿಯಲ್ಲಿ ರಚಿಸಿದ್ದಾರೆ. ಈ ಭಾವಚಿತ್ರವು ಗಾಯಕಿ ಆಶಾ ಭೋಶಲೆಯವರದು. ಈ ಕೃತಿಯ ಸುತ್ತಲೂ ಹಿತ್ತಾಳೆಯ ಎಂಬಾಸಿಂಗ್ ಫ್ರೇಂನ್ನು ವೃತ್ತಾಕಾರದಲ್ಲಿ ಹಾಕಿದ್ದಾರೆ. ಆಶಾ ಅವರು ತಮ್ಮ ತಂದೆಯ ನಾಟ್ಯ ಸಂಗೀತವನ್ನು ಹಾಡಿರುವರು. ಅದರಲ್ಲೂ ಭಕ್ತಿ ಸಂಗೀತವನ್ನು ಹಾಡಿದ್ದಾರೆ. ಸಿನೇಮಾ ಹಾಡುಗಳನ್ನು ಹಾಡಿದ್ದಾರೆ. ತಮಾಶೆಯಲ್ಲಿ ಲಾವಣಿ ಪದಗಳನ್ನು ಹಾಡಿದ್ದಾರೆ. ಹೀಗೆ ಎಲ್ಲ ಭಾಷೆಗಳಲ್ಲೂ, ಅವರು ಬೇರೆ ಬೇರೆ ಶೈಲಿಗಳಲ್ಲಿ, ಸಂಗೀತದಲ್ಲಿ, ಹುಡುಗರ ಧ್ವನಿಯಲ್ಲಿ, ಯೌವ್ವನದ ಸ್ವರದಲ್ಲಿ, ವಯಸ್ಕರ, ಮುದುಕಿಯರ ಧ್ವನಿಯಲ್ಲಿ ಹಾಡಿದ್ದಾರೆ. "ಆದರಿಂದ ನನಗೆ ಹೀಗೆನಿಸಿತು, ಕನ್ನಡಿಯಲ್ಲಿ ಎಲ್ಲ ಪ್ರತಿ ಕಾಣಿಸಿದಂತೆ, ಇವರ ಆಕೃತಿಯನ್ನು ಪಾರದರ್ಶಕ ಗಾಜಿನಲ್ಲಿ ಮಾಡಬೇಕೆನಿಸಿತು. ಹೀಗಾಗಿ ಆಶಾಭೋಸಲೆಯವರ ಭಾವಚಿತ್ರವನ್ನು ಬಣ್ಣ ಬಣ್ಣದ ಕರಿಮಣಿಯಲ್ಲಿ ಕೋಲಾಜ್ ರೀತಿ ಅಂಟಿಸಿ ತಯಾರಿಸಿದೆ" ಎನ್ನುತ್ತಾರೆ ಕಾಡಾಪೂರಕರ.

ವಿ. ಶಾಂತಾರಾಮ :

ಬಣ್ಣ ಬಣ್ಣದ ಬಟ್ಟೆಯ ಚೂರುಗಳನ್ನು ಜೋಡಿಸಿ ರಚಿಸಿದ ಭಾವಚಿತ್ರ

ವಿ. ಶಾಂತರಾಮ ಅವರದು. ಈ ಭಾವಚಿತ್ರ ರಚನೆಗಾಗಿ ಸಾಕಷ್ಟು ಶ್ರಮ ವಹಿಸಿ. ವಿವಿಧ ಬಣ್ಣಗಳ ಬಟ್ಟೆ ತುಂಡುಗಳನ್ನು ಮುಖ ವರ್ಣಕ್ಕೆ ಹೊಂದುವಂತೆ ಕತ್ತರಿಸಿ ಜೋಡಿಸಿದ್ದಾರೆ. ತಲೆಯ ಮೇಲಿನ ಟೋಪಿ, ಕೋಟುಗಳಿಗೆ ಮೂಲ ಬಟ್ಟೆಗಳನ್ನೇ ಉಪಯೋಗಿಸಿದ್ದಾರೆ.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ :

ಚರಕದಿಂದ ನೂಲು ತೆಗೆಯುವ ದೃಶ್ಯದ ಈ ವ್ಯಕ್ತಿ ಚಿತ್ರಕ್ಕೆ ಮಹಾತ್ಮ ಗಾಂಧೀಜಿಯವರಿಗೆ ಪ್ರಿಯವಾದ ಖಾದಿ ಬಟ್ಟೆಯಲ್ಲಿ ಸಂಪೂರ್ಣ ಕೃತಿಯನ್ನು ಕೋಲಾಜ್ ತಂತ್ರದಲ್ಲಿ ಜೋಡಿಸಿದ್ದಾರೆ. ಕೃತಿ ರಚನೆಗೆ ಬೇಕಾದ ವರ್ಣದ ಖಾದಿ ಬಟ್ಟೆಯ ತುಂಡುಗಳನ್ನು ಸಂಗ್ರಹಿಸಲು ವಿಶೇಷ ಕಾಳಜಿ ವಹಿಸಿದ್ದಾರೆ.

ಮಹಾತ್ಮಾ ಗಾಂಧೀಜಿಯವರು ಪುಸ್ತಕ ಓದುವುದರಲ್ಲಿ ಮಗ್ನರಾಗಿರುವ ಇನ್ನೊಂದು ಕೋಲಾಜ್ ಕಲಾಕೃತಿಯನ್ನು ಸಂಪೂರ್ಣವಾಗಿ ಖಾದಿಬಟ್ಟೆಯಲ್ಲಿ ಜೋಡಿಸಿದ್ದಾರೆ. ಕಲಾಕೃತಿಯಲ್ಲಿ ಗಾಂಧೀಜಿಯವರು ಓದುವುದರಲ್ಲಿಯ ಅವರ ಏಕಾಗ್ರತೆ, ನಿಶ್ಚಲಭಾವ, ವರ್ಣ, ಬಟ್ಟೆಗಳ ಹೊಂದಾಣಿಕೆ, ನೆರಳು-ಬೆಳಕು, ಹಿಂಬದಿಯಲ್ಲಿರುವ ಚರಕ, ಒಟ್ಟು ಕಲಾಕೃತಿಯು ತುಂಬ ನೈಜವಾಗಿ, ಆಕರ್ಷಕವಾಗಿ, ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

ಬಿಸ್ಮಿಲ್ಲಾ ಖಾನ್ :

ಖ್ಯಾತ ಶಹನಾಯಿ ವಾದಕ ಉಸ್ತಾದ ಬಿಸ್ಮಿಲ್ಲಾ ಖಾನ್ ಅವರ ಒಂದು ಕೈಯಲ್ಲಿ ಶಹನಾಯಿ ತುದಿ ಹಿಡಿದು, ಹಸನ್ಮುಖರಾಗಿರುವ ಈ ಭಾವಚಿತ್ರವನ್ನು ಸಂಪೂರ್ಣವಾಗಿ ಕಟ್ಟಿಗೆಯ ತುಂಡು, ಉಜ್ಜು ಗೋಟ ಹೊಡೆದ ಮೇಲೆ ಬರುವ ತೆಳುವಾದ ಚಿಪ್ಪು, ಮರದ ತೊಗಟೆಗಳನ್ನು ಬಳಸಿ, ಆಕರ್ಷಕವಾದ ವರ್ಣ ಸಂಯೋಜನೆ ಬರುವಂತೆ ಜೋಡಿಸಿದ್ದಾರೆ. ಈ ಕೃತಿಯಲ್ಲಿಯೂ ಅವರ ಸಂಯಮ ತಾಳ್ಮೆಯನ್ನು ಗಮನಿಸಬಹುದು.

ಸರ್ ಎಂ. ವಿಶ್ವೇಶ್ವರಯ್ಯ :

"ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಆಗುತ್ತಿತ್ತೆ ಕೃಷ್ಣರಾಜ ಸಾಗರಾ" ಎಂಬ ಶೀರ್ಷಿಕೆಯ ಈ ಭಾವಚಿತ್ರ ಸರ್. ಎಂ. ವಿಶ್ವೇಶ್ವರಯ್ಯನವರದು. ಈ

ಭಾವಚಿತ್ರವನ್ನು ಸಂಪೂರ್ಣವಾಗಿ ಗೋಧಿಯ ಹುಲ್ಲಿನಿಂದ ಮಾಡಿದ್ದಾರೆ. ನೆರಳು ಬೆಳಕಿನ ಸಲುವಾಗಿ ಗೋಧಿ ಕಡ್ಡಿಯನ್ನು ಸುಟ್ಟು, ವಿವಿಧ ಛಾಯೆಯನ್ನು ಪಡೆದಿದ್ದಾರೆ. ಈ ಕೃತಿಯ ವಿಶೇಷವೆಂದರೆ ಹಣೆಯ ಮಧ್ಯ ಭಾಗವನ್ನು ಕೇಂದ್ರ ಮಾಡಿಕೊಂಡು ಹಣೆಯಿಂದ ಜ್ಞಾನ ಕಿರಣಗಳು ಹರಡಿದಂತೆ ಗೋಧಿಕಡ್ಡಿಯನ್ನು ಅಂಟಿಸಿದ್ದಾರೆ. ಶರೀರಶಾಸ್ತ್ರ ಅಭ್ಯಾಸದ ದೃಷ್ಠಿಯಿಂದಲೂ, ನೆರಳು ಬೆಳಕಿನ ಹಂಚಿಕೆಯಿಂದಲೂ ಒಂದು ಉತ್ತಮ ಕೃತಿಯಾಗಿ ಹೊರ ಹೊಮ್ಮಿದೆ.

ದೀನನಾಥಜೀ :

ಇದೇ ಮಾದರಿಯ ಇನ್ನೊಂದು ಕೃತಿ ಮಾಸ್ಟರ ದೀನನಾಥಾಜೀಯವರದು. ಈ ಕೃತಿಯು ಸಹ ಗೋಧಿ ಹುಲ್ಲಿನಿಂದ ಮಾಡಿದ್ದಾರೆ. ಈ ಕೃತಿ ದೀರ್ಘ ವರ್ತುಳಾಕಾರದಲ್ಲಿದೆ. ಸುತ್ತಲೂ ಕಾಪರ್ ಎಂಬೋಸಿಂಗ್‌ನಲ್ಲಿ ಸುಂದರವಾದ ನಕ್ಷೆಯ ಫ್ರೇಂ ಸ್ವತಃ ತಯಾರಿಸಿ ಹಾಕಿದ್ದು ವಿಶೇಷವಾಗಿದೆ.

ಶ್ರೀ ಸಿದ್ಧೇಶ್ವರಸ್ವಾಮಿಗಳು :

ಬಿಜಾಪೂರದ ಪೂಜ್ಯ ಶ್ರೀ ಸಿದ್ಧೇಶ್ವರಸ್ವಾಮಿಗಳು ತಮ್ಮ ಪ್ರವಚನಗಳ ಮೂಲಕ ದೇಶ ವಿದೇಶಗಳಲ್ಲಿ ಹೆಸರುವಾಸಿಯಾದವರು. ಅವರು ನಿಪ್ಪಾಣಿಯಲ್ಲಿ ಪ್ರವಚನಕ್ಕೆ ಬಂದ ಸಂದರ್ಭದಲ್ಲಿ ಈ ಸವಿನೆನಪಿಗಾಗಿ, ಅವರು ಪ್ರವಚನ ನೀಡುತ್ತಿರುವ ಒಂದು ಸಂದರ್ಭದ ಚಿತ್ರವನ್ನು ಶ್ರೀ ಅಪ್ಪಾಸಾಹೇಬರು ಕೋಲಾಜ್‌ನಲ್ಲಿ ಭಾವಚಿತ್ರವನ್ನು ರಚಿಸಿದ್ದಾರೆ. ಸಂಪೂರ್ಣ ಭಾವಚಿತ್ರವನ್ನು ವಿವಿಧ ಬಣ್ಣಗಳ ಖಾದಿ ಬಟ್ಟೆಯ ತುಂಡುಗಳಿಂದ ಈ ಕಲಾಕೃತಿ ರಚನೆಯಾಗಿದೆ. ಶ್ರೀ ಸಿದ್ಧೇಶ್ವರ ಸ್ವಾಮಿಗಳ ಸರಳ ವ್ಯಕ್ತಿತ್ವ, ಸ್ವಭಾವ, ಸೇವಾ ಮನೋಭಾವ, ಕಲಾಕೃತಿಯಲ್ಲಿ ವ್ಯಕ್ತವಾಗುತ್ತವೆ. ಕಲಾಕೃತಿಯನ್ನು ನೋಡುತ್ತಾ ಹೋದಂತೆ ಸ್ವಾಮೀಜಿಯವರ ಪ್ರವಚನವನ್ನು ಸವಿದಂತೆ ಭಾಸವಾಗುತ್ತದೆ. ಕಲಾಕೃತಿಯನ್ನು ಸ್ವಾಮೀಜಿಯವರಿಗೆ ತೋರಿಸಿ ಆಶಿರ್ವಾದ ಪಡೆದಿದ್ದಾರೆ.

ಕಲಾಶಿಕ್ಷಣ :

"ಆಪತ್ತು ಮನುಷ್ಯನನ್ನು ಜಾಣನನ್ನಾಗಿ ಮಾಡುತ್ತದೆ. ತನ್ನರಿವೇ ತನಗೆ ಗುರು. ಎಲ್ಲಿಯೂ ಹೋಗಿ ಕಲಿಯಲು ನನಗೆ ಅನುಕೂಲವಾಗಲಿಲ್ಲ. ನಾನು ಮಾಡಿದ ಕೆಲಸ ಮುಂದಿಟ್ಟಾಗಲೇ ಅದು ಹೇಳುತ್ತಿತ್ತು. ನೀನು ಇದನ್ನು ಮಾಡಬೇಕು. ಯಾವಾಗ ನಮ್ಮ ಕೃತಿ ನಮ್ಮ ಜೊತೆ ಮಾತಾಡ್ತದ ಆವಾಗ

ಅದರಲ್ಲಿ ಅಂವಾ ಒಂದಾಗಿರ್ತಾನ. ಒಂದಾಗೋದನಾ ಬಹಳ ಮಹತ್ವದ್ದು" ಎಂದು ಹೇಳುವ ಅಪ್ಪಾಸಾಹೇಬರು ಈಗ ತಮ್ಮ 75ನೇ ವಯಸ್ಸಿನಲ್ಲಿಯೂ "ಇನ್ನೂ ಬಹಳಷ್ಟು ಕಲಿಯುವುದಿದೆ" ಎನ್ನುತ್ತಾರೆ.

"ನನ್ನ ಚಿತ್ರದಲ್ಲಿ ಆಧ್ಯಾತ್ಮದ ತಿಳುವಳಿಕೆ ಇದೆ" ಎಂದು ಹೇಳುವ ಇವರು ಚಿತ್ರಗಳಲ್ಲಿ 'ಆಕಾರ ಮಹಾನ್' ಎಂದು ಹೇಳುತ್ತಾರೆ. "ಬಹಳಷ್ಟು ಜನ ನನ್ನ ಪೇಂಟಿಂಗ್ ನೋಡಿ ನನಗೆ ಕಲಿಸಿ ಹೋದರು. ನನಗೆ ಕೆಲಸ ಕೊಡುತ್ತಿದ್ದ ಜನರು ನನಗೆ ಹೀಗೆ ಮಾಡಬೇಕು, ಇದನ್ನು ಹೀಗೆ ಮಾಡಬೇಕು ಎಂದು ಹೇಳುತ್ತಿದ್ದರು. ಕೆಲವರು ನನ್ನ ಆಕಾರಗಳು ಚೆನ್ನಾಗಿವೆ ಎಂದು ಹೇಳುತ್ತಿದ್ದರು. ಇನ್ನೂ ಕೆಲವರು ವರ್ಣ ಸಂಯೋಜನೆ ಚೆನ್ನಾಗಿದೆ ಎಂದು ಹೇಳುತ್ತಿದ್ದರು. ಅಪ್ಪಾಸಾಹೇಬರು ತಮ್ಮ ಸುತ್ತಮುತ್ತಲಿನ ಪರಿಸರದಿಂದ ಕಲಿತದ್ದು ಹೆಚ್ಚು ಅನೇಕ ಹಿರಿಯ ಕಲಾವಿದರ ಒಡನಾಟ ಹೀಗೆ ಒಬ್ಬೊಬ್ಬರಿಂದ ಒಂದೊಂದು ಕಲಿತು ನಾನು ಕಲಾವಿದನಾದೆ, ಆಧ್ಯಾತ್ಮ ಜೀವಿಯಾದ ತಂದೆ, ತಮ್ಮಂದಿರ ಪ್ರೋತ್ಸಾಹದಿಂದ ನಾನು ಬೆಳೆದೆನು ಎಂದು ಹೇಳುತ್ತಾರೆ".

ಬಾಲಕ ಅಪ್ಪಾಸಾಹೇಬನಿಗೆ ಚಿತ್ರಕಲೆಯ ಮೊದಲ ಗುರು ಎಂದರೆ ಅವರ ಅಜ್ಜ (ಆಯಿ) ಸಕ್ಕೂಬಾಯಿ, ನಂತರ ಸೋದರಮಾವ ಶ್ರೀ ಶಂಕರಪ್ಪಾ ರಾಮಪ್ಪಾ ಬಡಿಗೇರ. ಇವರಲ್ಲಿ ಚಿತ್ರಕಲೆಯ ಪ್ರಾಥಮಿಕ ಹಂತಗಳನ್ನು ತಿಳಿದುಕೊಂಡರು. ಉಳಿದಂತೆ ಇವರ ಚಿತ್ರಕಲಾ ಶಿಕ್ಷಣ ಏಕಲವ್ಯನ ಪ್ರಯತ್ನವಾಗಿತ್ತು. ಏಕಲವ್ಯನು ದ್ರೋಣಾಚಾರ್ಯರ ಮಣ್ಣಿನ ಮೂರ್ತಿ ಇಟ್ಟುಕೊಂಡು ಧನುರ್ವಿದ್ಯೆ ಕಲಿತಂತೆ ಅಪ್ಪಾಸಾಹೇಬರು ತಮ್ಮ ಕುಲದೇವರು ವಿಶ್ವಕರ್ಮರನ್ನು ಗುರುವಾಗಿ ಸ್ವೀಕರಿಸಿ ಚಿತ್ರಕಲೆಯನ್ನು ಮುಂದುವರೆಸಿದರು.

ಬಾಲಕ ಅಪ್ಪಾಸಾಹೇಬ ಚಿಕ್ಕವಯಸ್ಸಿನಲ್ಲಿಯೇ ಸಾಕಷ್ಟು ಚಿತ್ರಗಳನ್ನು ರಚಿಸಿದ್ದನು. ಚಿತ್ರ ಬರೆಯುವುದರಲ್ಲಿ ಹೆಸರು ಮಾಡಿದ್ದನು. ಇದನ್ನು ಗಮನಿಸುತ್ತಿದ್ದ ಇವರ ಮಿತ್ರನೊಬ್ಬ "ಅಪ್ಪಾಸಾಹೇಬ ನೀನು ಚಿತ್ರಗಳನ್ನು ಚೆನ್ನಾಗಿ ತೆಗೆಯುತ್ತಿ, ಆದ್ದರಿಂದ ನೀನು ಚಿತ್ರಕಲಾ ಪರೀಕ್ಷೆಗೆ ಕೂಡು, ಆಗ ನಿನಗೆ ಹೆಚ್ಚಿನ ಬೆಲೆ ಬರುತ್ತದೆ" ಎಂದು ಸಲಹೆ ನೀಡಿದನು. ಇದರಿಂದ ಉತ್ತೇಜಿತನಾದ ಅಪ್ಪಾಸಾಹೇಬ, ಚಿತ್ರಕಲಾ ಪರೀಕ್ಷೆಗೆ ಕುಳಿತುಕೊಳ್ಳಬೇಕಾದರೆ ಯಾರನ್ನು ಭೇಟಿಯಾಗಬೇಕು ? ಪರೀಕ್ಷೆ ತಯಾರಿ ಹೇಗೆ ? ಮುಂತಾದ ಪ್ರಶ್ನೆಗಳನ್ನು ಹಾಕಿಕೊಂಡು ಮಾಹಿತಿ ಸಂಗ್ರಹಿಸಿದನು. ಹಿರಿಯೊಬ್ಬರ ಸಲಹೆಯಂತೆ

ಚಿಕ್ಕೋಡಿಯ ಆರ್. ಡಿ. ಹೈಸ್ಕೂಲಿನಲ್ಲಿಯ ಚಿತ್ರಕಲಾ ಶಿಕ್ಷಕರಾದ ಶ್ರೀ ಟಂಕಸಾಲಿಯವರನ್ನು ಭೇಟಿಯಾಗಿ, ತನ್ನ ಪರೀಕ್ಷಾ ವಿಚಾರ ಅವರಿಗೆ ತಿಳಿಸಿದನು. ಜೊತೆಗೆ ತಾನು ತೆಗೆದಿದ್ದ ಕೆಲವು ಪೇಪರ್ ಮೇಲಿದ್ದ ಚಿತ್ರಗಳನ್ನು ತೋರಿಸಿದನು. ಅವುಗಳನ್ನು ನೋಡಿದ ಟಂಕಸಾಲಿಯವರು 'ಇದು ನೋಡು ತಮ್ಮ ಚಿತ್ರ ಉತ್ತಮ ತೆಗೆತಿ ಇಷ್ಟಕ್ಕ ಆಗಲಿಲ್ಲ. ಪರೀಕ್ಷೆಗೆ ಕೂಡ್ರುವದಾದರೆ ಎಲ್ಲ ವಿಷಯಗಳ ಮೇಲೆ ಅಭ್ಯಾಸವಾಗಬೇಕು. ಆ ವಿಷಯಗಳು, ಅಬ್ಜೆಕ್ಟ್, ಡಿಸೈನ್, ನೇಚರ್, ಫ್ರೀಹ್ಯಾಂಡ್, ಭೂಮಿತಿ, ಮೆಮರಿ ಹೀಗೆ ಆರು ವಿಷಯದ ಮೇಲೆ ಅಭ್ಯಾಸ ಮಾಡಬೇಕು." ಈ ವಿಷಯಗಳು ಬಾಲಕ ಅಪ್ಪಾಸಾಹೇಬನಿಗೆ ಕೇಳಿಯೂ ಗೊತ್ತಿರಲಿಲ್ಲ. ಹೇಗೆ ಮಾಡುವುದು ಎಂದು ಯೋಚಿಸುತ್ತಿದ್ದಾಗ ಮತ್ತೆ ಟಂಕಸಾಲಿ ಗುರುಗಳು ಬಾಲಕನಿಗೆ ಧೈರ್ಯ ಹೇಳಿ ವಾರದಲ್ಲಿ ಒಂದು ದಿನದಂತೆ, 1 ತಿಂಗಳಲ್ಲಿ 4 ದಿನ ಬಾ ಕಲಿಸುತ್ತೇನೆ ಎಂದರು. ಆ ಪ್ರಕಾರ ತಿಂಗಳಲ್ಲಿ ನಾಲ್ಕು, ದಿನ, ದಿನಕ್ಕೆ ಒಂದು ತಾಸಿನಂತೆ ಒಟ್ಟು ನಾಲ್ಕು ತಾಸು ಚಿತ್ರಕಲಾ ಅಭ್ಯಾಸ ಮಾಡಿದ ಅಪ್ಪಾಸಾಹೇಬ ಚಿತ್ರಕಲಾ ಪರೀಕ್ಷೆಗೆ ಕೂಡ್ರಲು ಆತ್ಮವಿಶ್ವಾದಿಂದ ತಯಾರಾದರು.

ಮುಂಬೈ ಸರಕಾರದ "ದಿ ಇಂಟರ್ ಮಿಡಿಯೇಟ್ ಗ್ರೇಡ್" ಚಿತ್ರಕಲಾ ಪರೀಕ್ಷೆಯ ಕೇಂದ್ರ ನಿಪ್ಪಾಣಿಯಲ್ಲಿತ್ತು. ಹೀಗಾಗಿ ಬಾಲಕ ಅಪ್ಪಾಸಾಹೇಬ ತನ್ನ 16 ನೇ ವಯಸ್ಸಿನಲ್ಲಿ ಅಂದರೆ 1952 ರಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಲು ಗೆಳೆಯರ ಸಂಗಡ ನಿಪ್ಪಾಣಿಯ ಮುನ್ಸಿಪಲ್ ಹೈಸ್ಕೂಲ್‌ಗೆ ಬಂದಿದ್ದರು. ಇವರ ಜೊತೆಯಲ್ಲಿ ಚಿತ್ರಕಲಾ ಶಿಕ್ಷಕರಾದ ಶ್ರೀ ಟಂಕಸಾಲಿಯವರು ಬಂದಿದ್ದರು. ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸಿದರು. 'ದಿ ಇಂಟರ್ ಮಿಡಿಯೇಟ್ ಗ್ರೇಡ್' ಪರೀಕ್ಷೆಯಲ್ಲಿ ಅಪ್ಪಾಸಾಹೇಬ 'ಬಿ' ಗ್ರೇಡ್‌ನಲ್ಲಿ ಪಾಸಾಗಿದ್ದನು. ಇದನ್ನು ತಿಳಿದ ಇವರ ತಂದೆಯವರಿಗೆ ತುಂಬಾ ಖುಷಿಯಾಯಿತು. ಅಂಕಲಿಯ ಹೋಟೆಲ್‌ನಲ್ಲಿ ನಾಲ್ಕು ಆಣೆ ಕೊಟ್ಟು ಪೇಡೆ ತೆಗೆದುಕೊಂಡು ಎಲ್ಲರಿಗೂ ಹಂಚಿ ಖುಷಿಪಟ್ಟರು. ಹೀಗೆ ಅಪ್ಪಾಸಾಹೇಬರು ಯಾವುದೇ ಸಾಂಪ್ರದಾಯಿಕ ಶಿಕ್ಷಣ ಪಡೆಯದಿದ್ದರೂ ತಮ್ಮ ನಿರಂತರ ಪ್ರಯೋಗ, ಕಲಾ ಚಿಂತನೆ, ಕಲೆಯಲ್ಲಿ ಒಂದಾಗುವ ಗುಣ ಅವರನ್ನು ಒಬ್ಬ ಕಲಾವಿದನನ್ನಾಗಿ ರೂಪಿಸಿದೆ.

ಕೌಟುಂಬಿಕ ಹಿನ್ನೆಲೆ :

ಕರ್ನಾಟಕದ ಕಲೆ, ಸಂಸ್ಕೃತಿ ಪ್ರಗತಿಯ ಹಿಂದೆ ಸಾಕಷ್ಟು ಕಲಾವಿದರ

ಮತ್ತು ಸಾಹಿತಿಗಳ ತ್ಯಾಗವಿದೆ. ತಮ್ಮ ಜೀವನವನ್ನೇ ತಾವು ಆಯ್ದುಕೊಂಡ ಕ್ಷೇತ್ರಕ್ಕೆ ಅರ್ಪಿಸಿದ್ದಾರೆ. ಹೀಗೆ ಕಲೆ, ಸಾಹಿತ್ಯ, ಜಾನಪದ, ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ತಮ್ಮನ್ನು ಅರ್ಪಿಸಿಕೊಂಡವರಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಕಾಡಾಪೂರ ಗ್ರಾಮದ ಸಾಲಿ ಕುಟುಂಬವು ಒಂದು. "ಸಾಲಿ" ಇದು ಒಂದು ಮನೆತನದ ಹೆಸರು, ಆದರೆ ಅಪ್ಪಾಸಾಹೇಬರು ಎಸ್. ಅಪ್ಪಾಸಾಹೇಬ ಕಾಡಾಪೂರಕರ ಎಂದು ಪ್ರಸಿದ್ಧಿ ಪಡೆದರು.

ಮೂಲತಃ ಇವರು ನವಲಗುಂದದ ಮೂಲ ನಿವಾಸಿಗಳು. ರಾಮದುರ್ಗ ತಾಲ್ಲೂಕಿನ ತೋರಗಲ್ ಸಂಸ್ಥಾನದಲ್ಲಿ ಇವರ ಪೂರ್ವಜರು ಕಲಾವಂತ ರಾಗಿದ್ದರು. ತೋರಗಲ್ಲಗೆ ತವಲಗೇರಿ ಅಂತಲೂ ಕರೆಯುತ್ತಿದ್ದರು. "ಪೂರ್ವಜರಿಗೆ ಸಾಕಷ್ಟು ಜಮೀನು, ಎಲ್ಲಾ ಸೌಕರ್ಯದಿಂದ ಸಂತೋಷವಾಗಿದ್ದರು. ಕಲಾವಿದ ಅಪ್ಪಾಸಾಹೇಬರ ಮುತ್ತಜ್ಜ–ಹುಚ್ಚಬಸಪ್ಪ, ಒಂದು ಕಲಾಕೃತಿಯನ್ನು ತೋರಗಲ್ ಸಂಸ್ಥಾನದ ರಾಜರಿಗೆ ಮಾಡಿಕೊಟ್ಟರು. ಆಗ ಕಲಾಕೃತಿ ನೋಡಿದ ರಾಜರು ಹುಚ್ಚು ಬಸಪ್ಪನವರಿಗೆ ಏನು ಬೇಕು ಕೇಳು, ಎಂದರಂತೆ. ಆಗ ಹುಚ್ಚಬಸಪ್ಪ "ನಿಮ್ಮ ಆಶೀರ್ವಾದದಿಂದ ಚೆನ್ನಾಗಿದ್ದೇವೆ. ಏನೂ ಬೇಡ ಎಂದರಂತೆ". ಆದರು ರಾಜರು ಒತ್ತಾಯಿಸಿದಾಗ, ನಾನು ಮನೆಯಿಂದ ಅರಮನೆಗೆ ಹೋಗಿ ಬರಲು ಹಗಲು ದೀವಟಿಗೆ, ಕೊಡಲು ಕೇಳಿಕೊಂಡೆ ಆಗ ರಾಜರು ಒಪ್ಪಿ, ಹಗಲು ದೀವಟಿಗೆ, ಎಣ್ಣೆ ಹಾಕಲು ಒಂದು ಜಮೀನು ನೀಡದರಂತೆ. ಹೀಗೆ ಹುಚ್ಚಬಸಪ್ಪ ಮನೆಯಿಂದ ಅರಮನೆಗೆ ಕುದುರೆ ಮೇಲೆ ಹೋಗುತ್ತಿದ್ದರಂತೆ. ಆಳು ಕುದುರೆಯ ಮುಂದೆ ದೀವಟಿಗೆ ಹಿಡಿದುಕೊಂಡು ಹೋಗುತ್ತಿದ್ದನು. ಹೀಗೆ "ಮಾನದ ಮಶಾಲ" ಅವರಿಗೆ ಕಾಣಿಕೆಯಾಗಿ ಬಂದಿತು. ಇಂದಿಗೂ ಕಲಾವಿದ ಅಪ್ಪಾಸಾಹೇಬರು ದೊಡ್ಡ ಕಾರ್ಯಕ್ರಮ, ಪ್ರದರ್ಶನಗಳಲ್ಲಿ ಮಾಶಾಲ್ ದ್ವೀಪವನ್ನು ಬೆಳಗಿಸುತ್ತಾರೆ. ಹುಚ್ಚಬಸಪ್ಪನವರ ನಂತರ ಸಾಲಿಯವರ ಮನೆತನದಲ್ಲಿ ಅಪ್ಪಾಸಾಹೇಬರಿಂದ ಚಿತ್ರಕಲೆ ಮುಂದುವರೆದಿದೆ. ತೊರಗಲ್ಲನಲ್ಲಿ ಅಖಂಡಪ್ಪಾ ಹಾಗೂ ಸಕ್ಕೂಬಾಯಿಯವರಿಗೆ ಚಂದ್ರವ್ವಾ, ಬಸವಂತಪ್ಪಾ ಹಾಗೂ ಸರಸ್ವತಿ ಮೂರು ಜನ ಮಕ್ಕಳಾದರು. ಹೀಗೆ ಇವರ ಸಂಸಾರ ಸುಖರೂಪದಿಂದ ಸಾಗುತ್ತಿರಲು, ಕಾಡಾಪೂರದಲ್ಲಿ ಸಕ್ಕೂಬಾಯಿಯವರ ತಂದೆ ತಾಯಿಯವರಿಗೆ ಗಂಡು ಮಕ್ಕಳಿರಲಿಲ್ಲ. ಹೀಗಾಗಿ ಅತ್ತೆ ಮಾವರ ಒತ್ತಾಯದ ಕರೆಯ ಮೇರೆಗೆ ಅಖಂಡಪ್ಪಾ ದಂಪತಿಗಳು ಅತ್ತೆಯ ಊರಿಗೆ ಬಂದರು, ಅತ್ತೆಯ ಮನೆಯಲ್ಲಿ ಬೇಡವೆಂದ ಅಖಂಡಪ್ಪಾ ಕೇರೂರದಲ್ಲಿ ನಿಂತು ಕಾಡಾಪೂರದ ಹೊಲ ಮನೆ

ನೋಡಿಕೊಳ್ಳುತ್ತಿದ್ದರು. ಇದರಿಂದ ಇವರ ಮನೆತನಕ್ಕೆ "ಕಾಡಾಪೂರಕರ" ಎಂದು ಹೆಸರು ಬಂತು. ಕಾಡಾಪೂರ ಇದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಒಂದು ಪುಟ್ಟ ಗ್ರಾಮ. ಇಂಥ ಸಾಧ್ವಿ ದಂಪತಿಗಳಿಗೆ ಜನಿಸಿದ ಬಸವಂತಪ್ಪಾ ತಮ್ಮ ಮೂಲ ವೃತ್ತಿಯಾದ ಪತ್ತಾರಿಕೆಯನ್ನು ಮಾಡುತ್ತಿದ್ದರು. ಜೊತೆಗೆ ಆಧ್ಯಾತ್ಮದ ಕಡೆಗೆ ಬಹಳ ಒಲವಿತ್ತು. ಕುಮಾರ ಬಸವಂತಪ್ಪನವರಿಗೆ ಶ್ರೀಮಂತಿ ಎಂಬ ಕನ್ಯೆಯೊಂದಿಗೆ ಮದುವೆ ಮಾಡಲಾಯಿತು. ಆಧ್ಯಾತ್ಮ ಜೀವಿಯಾದ ಈ ದಂಪತಿಗಳಿಗೆ ಗೋದಾವರಿ, ಕಲಾವಿದ ಅಪ್ಪಾಸಾಹೇಬ, ಸುಭದ್ರ, ಅಕ್ಕತಾಯಿ, ಅಣ್ಣಾಸಾಹೇಬ, ಶಿವಪುತ್ರಪ್ಪ, ಚಿದಾನಂದ, ಬಸವ್ವ ಹೀಗೆ 8 ಜನ ಮಕ್ಕಳನ್ನು ಪಡೆದ ಶ್ರೀಮತಿಯವರು ಅಷ್ಟಪುತ್ರ ಸೌಭಾಗ್ಯವತಿಯಾಗಿ ಬಾಳಿದಳು. ಮಕ್ಕಳು ದೊಡ್ಡವರಾಗಿ, ಮೂಲ ಕಸಬು ಪತ್ತಾರಿಕೆಯನ್ನು ಮಕ್ಕಳು ಮಾಡಲು ಪ್ರಾರಂಭಿಸಿದಾಗ ಬಸವಂತಪ್ಪನವರು ತಮ್ಮನ್ನು ಸಂಪೂರ್ಣವಾಗಿ ಆಧ್ಯಾತ್ಮದಲ್ಲಿ ತೊಡಗಿಸಿಕೊಂಡರು. ಗೃಹಸ್ಥಾಶ್ರಮದಲ್ಲಿದ್ದು, ಆಧ್ಯಾತ್ಮದ ಶಿಖರವನ್ನೇರಿದರು.

ಕಲಾವಿದ ಅಪ್ಪಾಸಾಹೇಬರ ತಂದೆಯವರಾದ ಆಧ್ಯಾತ್ಮ ಜೀವಿ ಬಸವಂತಪ್ಪನವರು ತಮ್ಮ 90 ವರ್ಷಗಳ ಸಾರ್ಥಕ ಜೀವನವನ್ನು ಹೆಚ್ಚಾಗಿ ಆಧ್ಯಾತ್ಮದಲ್ಲಿಯೇ ಕಳೆದರು. ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಸುತ್ತಾಡಿ ಜನರಿಗೆ ಭಕ್ತಿ, ಜ್ಞಾನ, ವೈರಾಗ್ಯಗಳ ಆಧ್ಯಾತ್ಮ ಪ್ರವಚನ ನೀಡುತ್ತ ವರ್ಷದಲ್ಲಿ 8-9 ತಿಂಗಳು ಮನೆ ಬಿಟ್ಟು ಹೊರಗಡೆಯೇ ಇರುತ್ತಿದ್ದರು. ಈ ಸಂದರ್ಭದಲ್ಲಿ ಜನಪದ ಗೀತೆಗಳನ್ನು ಬರೆಯುವುದು. ಲಾವಣಿ ಡೊಳ್ಳಿನ ಪದ, ಸ್ತೋತ್ರಗಳು, ಅಲ್ಲದೆ, ಅವರು ಅನೇಕ ಗ್ರಂಥಗಳನ್ನು ಬರೆದರು. ಶ್ರೀ ಕಾಳಿಕಾ ಮಹಾತ್ಮೆ, ಶ್ರೀ ವಿಶ್ವಕರ್ಮ ಪುರಾಣ, ಶ್ರೀ ವಿಶ್ವಕರ್ಮ ಶತಕ, ವಿಶ್ವಕರ್ಮ ಸ್ತೋತ್ರನಾಮಾವಳಿ ಬರೆದರು. ಶಿವಪಾರಿಜಾತವನ್ನು ಮೊದಲು ಬರೆದು ಆಡಿ ತೋರಿಸಿದಫರಲ್ಲಿ ಇವರೇ ಮೊದಲಿಗರು. ಶ್ರೀ ಕೃಷ್ಣ ಪಾರಿಜಾತದಿಂದ ಪ್ರೇರಣೆ ಪಡೆದು ಇದೇ ಮಾದರಿಯಲ್ಲಿ ಇವರು ರಚಿಸಿದ "ಶಿವಪಾರಿಜಾತ ಬಯಲಾಟವು ಕನ್ನಡ ಜನಪದಕ್ಕೆ ಅವರು ನೀಡಿದ ಅತ್ಯಮೂಲ್ಯ ಕೊಡುಗೆಯಾಗಿದೆ. ಇವರ ಇನ್ನೊಬ್ಬ ಮಗ ಶ್ರೀ ಪೂರ್ಣಾನಂದರು, ತಂದೆಯವರನ್ನು ಶ್ರೀ ಬಸವಾನಂದಸ್ವಾಮಿಗಳು ಎಂದು ಸಂಬೋಧಿಸಿ ಅವರ ಕುರಿತು 'ಆರ್ಷವಾಣಿ' (ಜ್ಞಾನವಾಣಿ) ಪುಸ್ತಕ ಬರೆದು ಬಿಡುಗಡೆ ಮಾಡಿದ್ದಾರೆ. ಹೀಗೆ ಬಸವಂತಪ್ಪನವರು 'ಶಿವ ಪಾರಿಜಾತ' ಎಂಬ ಶ್ರೇಷ್ಠ ಕೃತಿಯನ್ನು ಬರೆದು ಅದರಲ್ಲಿ ಸ್ವತಃ ಪಾತ್ರವಹಿಸಿ ಆಡಿ ತೋರಿಸಿದರು. ಆಧ್ಯಾತ್ಮದಲ್ಲಿ ತೊಡಗಿಸಿಕೊಂಡ ಇವರನ್ನು ಬಸವಂತಪ್ಪಾ ಶಾಸ್ತ್ರೀ,

ಶ್ರೀ ಬಸವಾನಂದ ಮಹಾ ಸ್ವಾಮಿಗಳೆಂದು ಜನ ಗೌರವಿಸಿದರು. ಅನೇಕ ಜಗದ್ಗುರುಗಳು, ಸ್ವಾಮಿಗಳು ಇವರಿಗೆ ಪಂಡಿತ ಸಾಲಿಶಾಸ್ತ್ರಿ ಎಂದು ಬಿರುದು ಕೊಟ್ಟರು. ಜಾನಪದ ಅಕಾಡೆಮಿ ಬೆಂಗಳೂರು, ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿತು, ತಂದೆಯಂತೆ ಮಗ ಅಪ್ಪಾಸಾಹೇಬರು ಶ್ರೇಷ್ಠ ಕಲಾವಿದರಾಗಿ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿಗೆ ಪಾತ್ರರಾದರು.

ಬಾಲ್ಯ ಪರಿಸರ, ಶಿಕ್ಷಣ :

"ನನ್ನ ಬಗ್ಗೆ ಒಂದು ಪೇಪರನಲ್ಲಿ ಹಿಂಗ ಬಂತು 'ಉಕ್ರಂಡಾತ ಝಾಕಲೆಲೆ ಹೀರಾ' ತಿಪ್ಪ್ಯಾಗ ಮುಚ್ಚಿದ ರತ್ನ, ಇದು ಸತ್ಯ ಹಿಂಗ, ಆಗ ಪ್ರಸೂತಿ ಗೃಹ ಇರಲಿಲ್ಲ. ಏನೂ ಇರಲಿಲ್ಲ. ಆಗ ನನ್ನ ತಾಯಿ ಹಿತಲಾಗ ತಿಪ್ಪ್ಯಾಗ ಹಡದಳು" ಹೀಗೆ ಅಪ್ಪಾಸಾಹೇಬರು ತಮ್ಮ ಜನನ ಬಗೆಗಿನ ಮಾಹಿತಿಯನ್ನು ಸ್ಮರಿಸಿಕೊಳ್ಳುತ್ತಾರೆ.

ಆಧ್ಯಾತ್ಮ ಜೀವಿಯಾದ ಶ್ರೀ ಬಸವಂತಪ್ಪಾ ಶಾಸ್ತ್ರೀ ಹಾಗೂ ಶ್ರೀಮಂತಿ ದಂಪತಿಗಳ ಎರಡನೆಯ ಮಗನಾಗಿ ಅಪ್ಪಾಸಾಹೇಬ ದಿನಾಂಕ 21 ಅಕ್ಟೋಬರ 1936ರಂದು ಕಾಡಾಪೂರದಲ್ಲಿ ಜನಿಸಿದರು. ಈ ದಂಪತಿಗಳಿಗೆ ಒಟ್ಟು 4 ಗಂಡು ಮಕ್ಕಳು, 4 ಹೆಣ್ಣು ಮಕ್ಕಳು. ಮೊದಲ ಮಗು ಹೆಣ್ಣು ಆದಾಗ ಎಲ್ಲರೂ ನಿರಾಶರಾಗಿದ್ದರಂತೆ, ಬಳಿಕ ಎರಡನೆಯ ಗಂಡು ಮಗು ಅಪ್ಪಾಸಾಹೇಬರು ಹುಟ್ಟಿದಾಗ ಎಲ್ಲರಿಗೂ ಆನಂದವೇ ಆನಂದವಾಯಿತಂತೆ. ತಮ್ಮ ಬಾಲ್ಯದ ದಿನಗಳನ್ನು ಅಪ್ಪಾಸಾಹೇಬರು ಹೀಗೆ ನೆನಪಿಸಿಕೊಳ್ಳುತ್ತಾರೆ. "ನನ್ನ ಆಯಿ ಬಾಲ್ಯ ದಿವಸಗಳನ್ನು ಹೇಳುತ್ತಿದ್ದರು. ನನ್ನನ್ನು ತೊಟ್ಟಿಲಲ್ಲಿ ಹಾಕಿ ಹೆಸರು ಇಡುವಾಗ ಶ್ರೀ ಮರೆಪ್ಪಾ ಜೋಶಿ ಎಂಬುವನು ನನ್ನ ಜನ್ಮ ಕುಂಡಲಿ ಓದಿ ತೋರಿಸಿ ಈ ಬಾಲಕ, ಬಾಲ್ಯದಿಂದಲೇ ಚಿತ್ರ ತೆಗೆಯುತ್ತಾನೆ. ಒಂದು ದಿವಸ ದೊಡ್ಡ ಚಿತ್ರಕಾರನಾಗುವನು ಎಂದು ಹೇಳಿದ. ಇದನ್ನು ಕೇಳಿ ಎಲ್ಲರಿಗೂ ಆನಂದವಾಯಿತು. ನಮ್ಮ ತಂದೆಯವರು ಒಳಗೆ ಹೋಗಿ ಜೋಶಿಯವರಿಗೆ ಆಯಾರ, ಶ್ರೀಫಳ, ಅವನ ಕೈಯಲ್ಲಿ ಬೆಳ್ಳಿ ತೋಡೆ ಹಾಕಿ ಸತ್ಕರಿಸಿದರು". ಹೀಗೆ ಗಂಡು ಮಗ ಹುಟ್ಟಿದ ಸುದ್ದಿ ಹಾಗೂ ಅವನು ಮುಂದೆ ಚಿತ್ರಕಾರನಾಗುವ ಸುದ್ದಿ ಬಸವಂತಪ್ಪ ದಂಪತಿಗಳಿಗೆ ಸಹಜವಾಗಿ ಆನಂದ ತಂದಿತ್ತು.

ಬಾಲಕ ಅಪ್ಪಾಸಾಹೇಬರ ಅಜ್ಜಿ ಜಾನಪದ ಗೀತೆಗಳನ್ನು ಹಾಡುವುದು,

ಜೋಗುಳ ಪದ ಹಾಡುವುದರಲ್ಲಿ ಪ್ರಸಿದ್ಧಳಾಗಿದ್ದಳು. ಗಣೇಶ ಹಬ್ಬ ಬಂದರೆ ಸಾಕು ಒಂದೆರೆಡು ತಿಂಗಳು ಮುಂಚೆಯೇ ಗಣೇಶ ಮೂರ್ತಿಯನ್ನು ಮಾಡಲು ಪ್ರಾರಂಭಿಸುತ್ತಿದ್ದಳು. ಬಾಲಕ ಅಪ್ಪಾಸಾಹೇಬ ಆಯಿಗೆ ಗಣೇಶನನ್ನು ಮಾಡಲು ಮಣ್ಣು ಕುಟ್ಟಿಕೊಡುವುದು, ಮಣ್ಣನ್ನು ಹದ ಮಾಡುವುದು, ಆಯಿ ಸಕ್ಕುಬಾಯಿ ಗಣಪತಿ ಮೂರ್ತಿ ಮಾಡುತ್ತಿರುವುದನ್ನು ನೋಡಿ, ಬಾಲಕ ಅಪ್ಪಾಸಾಹೇಬ ಇಲಿಗಳನ್ನು ಮಾಡುವುದು, ಗಣೇಶನ ಕೈಗಳನ್ನು ಮಾಡುವುದು, ಗಣಪತಿ ಪಡಿಯಚ್ಚು ತಯಾರಿಸುವುದು. ಹೀಗೆ ಆಯಿಗೆ ಸಹಾಯ ಮಾಡುತ್ತಾ ಮಣ್ಣಿನ ಕೆಲಸದಲ್ಲಿ ತೊಡಗಿದ. ಅಪ್ಪಾಸಾಹೇಬ ತನಗೆ ಗೊತ್ತಿಲ್ಲದೆ ಚಿತ್ರ, ಶಿಲ್ಪಗಳಲ್ಲಿ ಪಳಗುತ್ತಿದ್ದನು. ಹೀಗೆ ಚಿತ್ರಕಲೆಯಲ್ಲಿ ಆಯಿ ಸಕ್ಕೂಬಾಯಿಯೇ ಅಪ್ಪಾಸಾಹೇಬರಿಗೆ ಮೊದಲ ಗುರು. ಬಾಲಕನಿಗೆ ಚಿತ್ರಕಲೆಯ ತಳಪಾಯ ಹಾಕಿದರು. ಊರಲ್ಲಿ ಸಿಗುವ ಶಿವಾಜಿ ಛಾಪ ಬಣ್ಣಗಳನ್ನು ಗಣಪತಿಗೆ ಉಪಯೋಗಿಸುತ್ತಿದ್ದರು. ನಾನು "ಗಣಪತಿಯ ಕಣ್ಣು ಮತ್ತು ನಾಮ ನಾನು ಸಣ್ಣ ಬ್ರಶ್‌ನಿಂದ ಮಾಡುತ್ತಿದ್ದೇನು". ಇದೇ ನಾನು ಮೊದಲ ಬ್ರಶ್ ಹಿಡಿದದ್ದು ಎಂದು ಅಪ್ಪಾಸಾಹೇಬರು ನೆನಪಿಸಿಕೊಳ್ಳುತ್ತಾರೆ.

ಚಿಕ್ಕವನಿದ್ದಾಗ ಅಪ್ಪಾಸಾಹೇಬರು ತನ್ನ ಕಣ್ಣಿಗೆ ಕಾಣುವ ವಸ್ತುಗಳನ್ನು ಎಮ್ಮೆ, ಕುರಿ, ಕೋಳಿ, ಹುಂಜ, ಮರಿಗಳು ತನಗೆ ಚಿತ್ರಿಸಬೇಕೆಂಬುದನ್ನು ಖಡು, ಇದ್ದಿಲು, ಪೆನ್ಸಿಲ್‌ನಿಂದ ಪಾಟೀಯ ಮೇಲೆ, ಗೋಡೆಯ ಮೇಲೆ ಬರೆಯುತ್ತಿದ್ದರು. ಇವರ ಸೋದರಮಾವ ಒಂದು ದಿನ ಇವರು ಬಿಡಿಸುತ್ತಿದ್ದ ಚಿತ್ರ ನೋಡಿ ಖುಷಿಪಟ್ಟರು. ಸೋದರಮಾವ ಶಂಕರಪ್ಪಾ ರಾಮಪ್ಪಾ ಬಡಿಗೇರ ಇವರು ಚಿತ್ರಕಾರರಾಗಿದ್ದರು. ಹೀಗಾಗಿ ಬಾಲಕ ಅಪ್ಪಾಸಾಹೇಬನ ಚಿತ್ರಕಲಾ ಆಸಕ್ತಿಯನ್ನು ಕಂಡು "ಅಪ್ಪಾಸಾಹೇಬ ನಿನಗೆ ದಿನಾಲು ಸಂಜೆ ವೇಳೆ ಒಂದು ಗಂಟೆ ಚಿತ್ರಕಲೆಯನ್ನು ಕಲಿಸುತ್ತೇನೆ ಬಾ" ಎಂದು ಹೇಳಿದರು. ಇದರಿಂದ ಬಾಲಕನಿಗೆ ಸಂತೋಷವಾಯಿತು. ಇವರ ಗೆಳೆಯರಾದ ವಿರೂಪಾಕ್ಷ ನಾರಾಯಣ, ಭೀಮಪ್ಪ ಗುರುನಾಥ ಮುಂತಾದ ಗೆಳೆಯರೊಂದಿಗೆ 5–6 ತಿಂಗಳ ಸೋದರಮಾವನ ಹತ್ತಿರ ಚಿತ್ರಕಲಾ ಅಭ್ಯಾಸ ಮಾಡಿದರು.

ಬಾಲಕ ಅಪ್ಪಾಸಾಹೇಬ ಶಾಲೆಯಲ್ಲಿ ಅಭ್ಯಾಸದ ಬದಲಾಗಿ ಚಿತ್ರಗಳನ್ನು ತೆಗೆಯುತ್ತಾ ಕುಳಿತುಕೊಳ್ಳುತ್ತಿದ್ದನು. ಇದನ್ನು ನೋಡಿದ ಶಿಕ್ಷಕರು ಶಾಲೆಯಲ್ಲಿ ಹಾಕಲು ಚಿತ್ರಪಟಗಳನ್ನು ಇವರಿಂದ ತೆಗೆಸುತ್ತಿದ್ದರು. ತಮ್ಮ ಅಣ್ಣಾಸಾಹೇಬನು

ಇವನಿಗೆ ಸಹಾಯ ಮಾಡುತ್ತಿದ್ದನು. ಹೀಗೆ ಅಣ್ಣ ತಮ್ಮ ಇಬ್ಬರೂ ಸೇರಿ ಸುತ್ತ ಮುತ್ತಲಿನ ಹಳ್ಳಿಗಳಾದ ರೂಪಿನಾಳ, ನಂದಿಕುರಳಿ, ನಸಲಾಪೂರ, ಕೇರೂರು, ಎಕ್ಸಂಬಾ ಗ್ರಾಮಗಳ ಶಾಲೆಯಲ್ಲಿ ಚಿತ್ರಪಟ ತಯಾರಿಸಿ ಕೊಡುತ್ತಿದ್ದರು. ಒಂದು ದಿನ ಶಾಲಾ ತಪಾಸಣಾಧಿಕಾರಿಗಳು ಇವರ ಚಿತ್ರ ಕಂಡು ಬೆರಗಾಗಿ, ಸ್ವತಃ ಬಾಲಕನ ಮುಂದೆ ರೂಪದರ್ಶಿಯಾಗಿ ಕುಳಿತು, ಸ್ಕೆಚ್ ಮಾಡಿಸಿದರು. ಆಗ ಸ್ಕೆಚ್‌ನಲ್ಲಿ ತನ್ನ ರೂಪವನ್ನು ಕಂಡ ಇನ್ಸ್‌ಪೆಕ್ಟರ್ ಹಿರೇಮಠ ಸಾಹೇಬರು ಖುಷಿಯಾಗಿ "ಬೆನ್ನು ಚಪ್ಪರಿಸಿ" ಹರಿಸಿದರು. ಖುಷಿಯಲ್ಲಿ ಬಾಲಕನಿಗೆ ದುಡ್ಡುಕೊಟ್ಟು ಕಳಿಸಿದರು. ಹೀಗೆ ಬಾಲಕ ಅಪ್ಪಾಸಾಹೇಬನ ಕಲಾಪ್ರೇಮ ದೃಢವಾಗುತ್ತಾ ಹೋಯಿತು. ಈ ದಾರಿಯಲ್ಲಿ ಕಷ್ಟಗಳಿವೆ, ಸುಖವಿದೆ ಎನ್ನುವುದನ್ನು ನೋಡದೆ ಜೀವನ ಸಾಗಿತು. ಬಾಲಕನಿದ್ದಾಗಲೇ ಅಪ್ಪಾಸಾಹೇಬನಿಗೆ ನಾಟಕಗಳಲ್ಲಿ ಬ್ಯಾನರ್ ಬರೆಯುವುದು, ನಾಟಕ ಪರದೆಯ ಸನ್ನಿವೇಶದ ಚಿತ್ರಗಳನ್ನು ತೆಗೆಯುವುದರಲ್ಲಿ ಪ್ರಸಿದ್ಧನಾದನು. ಸುತ್ತಮುತ್ತಲಿನ ಜನರಿಗೆ ಯಾವುದೇ ಚಿತ್ರ ತೆಗೆಯಬೇಕಾದರೆ "ಪತ್ತಾರ ಹುಡುಗ ಅಪ್ಪಯ್ಯ ಬಾಳ ಚೆನ್ನಾಗಿ ತೆಗಿತಾನ, ಅವನ್ನ ಹತ್ತಿರ ತಗಿಸರಿ" ಎನ್ನುತ್ತಿದ್ದರು. ಈ ಕಲಾ ಸೇವೆಗಾಗಿ ಜನರು ಅವನಿಗೆ ಜೋಳ, ಗೋಧಿ, ಕಡಲೆ, ಬೆಲ್ಲ ಮೊದಲಾದ ಆಹಾರ ಧಾನ್ಯಗಳನ್ನು ಕೊಡುತ್ತಿದ್ದರು.

ಭಾರತದ ಸ್ವಾತಂತ್ರ್ಯ ಚಳುವಳಿಯ ಆ ಸಂದರ್ಭದಲ್ಲಿ ಬಹಿರಂಗ ಸಭೆ ಹಾಗೂ ಮೆರವಣಿಗೆ ಏರ್ಪಡಿಸುವವರಿದ್ದರು. ಸರದಾರ ಶ್ರೀ ವಲ್ಲಭಭಾಯಿ ಪಟೇಲ ಮೆರವಣಿಗೆಯಲ್ಲಿ ಪಾಲ್ಗೊಳ್ಳುವವರಿದ್ದರು. ಸಭೆಯ ಸಂಘಟಕರು ಅಪ್ಪಾಸಾಹೇಬ ಅವರಿಂದ ವಲ್ಲಭಭಾಯಿಯವರ ಪೇಂಟಿಂಗ್ ಮಾಡಿಸಿ, ಮೆರವಣಿಗೆಯಲ್ಲಿ ಚಿತ್ರಗಳನ್ನು ಇಟ್ಟರು. ಸ್ವತಃ ವಲ್ಲಭಭಾಯಿಯವರು ಪೇಂಟಿಂಗ್ ನೋಡಿ ಖುಷಿಪಟ್ಟರು. ಹೀಗೆ ಬಾಲಕನಿರುವಾಗಲೇ ಚಿತ್ರಕಲೆಯಲ್ಲಿ ಪ್ರಸಿದ್ಧಿ ಪಡೆದು ಹೆಸರುವಾಸಿಯಾದರು. ಬಿಡುವಿಲ್ಲದಂತೆ ಕೆಲಸಗಳು ಬರುತ್ತಿದ್ದವು. ತಾವು ಮಾಡುತ್ತಿದ್ದ ಕೆಲಸದಲ್ಲಿ ಮಗ್ನರಾಗಿ ಚಿತ್ರಿಸಿಕೊಡುತ್ತಿದ್ದರು. ಇದರಿಂದ ಪ್ರಾಥಮಿಕ ಶಿಕ್ಷಣವನ್ನು 4ನೇ ತರಗತಿಯವರೆಗೆ ಕಲಿತು, ಶಾಲೆ ಬಿಟ್ಟು ಚಿತ್ರಕಲೆಗೆ ತಮ್ಮನ್ನು ತೊಡಗಿಸಿಕೊಂಡರು.

ಕೌಟುಂಬಿಕ ಜೀವನ :

ಯುವಕ ಅಪ್ಪಾಸಾಹೇಬ ಹಾಗೂ ತಮ್ಮನ ಮದುವೆ ಕೂಡಿಯೇ ಮಾಡುವುದೆಂದು ಹಿರಿಯರು ನಿಶ್ಚಯಿಸಿದರು. ಬೆಲ್ಲದ ಬಾಗೇವಾಡಿಯ

ಶ್ರೀ ಮಹಾದೇವಪ್ಪಾ ಪತ್ತಾರ ಹಾಗೂ ಸೋನವ್ವಾ ಮಹಾದೇವಪ್ಪಾ ಪತ್ತಾರ ದಂಪತಿಗಳ ಮಗಳು ಸೌ. ವಿಮಲಾಳೊಂದಿಗೆ ವಿವಾಹ ಕಾಡಾಪೂರದಲ್ಲಿ ಜರುಗಿತು. ಅಪ್ಪಾಸಾಹೇಬರ ಕಲಾಕ್ಷೇತ್ರಕ್ಕೆ ಕಾಡಾಪೂರ ಗ್ರಾಮ ಚಿಕ್ಕದೆನಿಸಿತು. ಇವರಿಂದ ಮದುವೆಗಿಂತ ಮೊದಲೇ ನಿಪ್ಪಾಣಿಗೆ ಹೋಗಿ ಕಲಾವೃತ್ತಿಯನ್ನು ಪ್ರಾರಂಭಿಸಿದ್ದರು. ಹೀಗಾಗಿ ಮದುವೆಯಾದ ಮೇಲೆ ಹೆಂಡತಿ ವಿಮಲಾಳನ್ನು ಕರೆದುಕೊಂಡು ನಿಪ್ಪಾಣಿಗೆ ಹೋದರು. ಮದುವೆಯಾದ್ದರಿಂದ ಸಂಸಾರದ ಜವಾಬ್ದಾರಿ ಹೆಚ್ಚಾಗಿತ್ತು. ಅಪ್ಪಾಸಾಹೇಬರಿಗೆ 2ಗಂಡು, 1ಹೆಣ್ಣು ಹೀಗೆ ಮೂವರು ಮಕ್ಕಳು ಜನಿಸಿದರು. ಮೊದಲನೆಯ ಮಗ ಚಕ್ರವರ್ತಿ, ಎರಡನೆಯ ಮಗಳು ಸುಶೀಲಾ, ಮೂರನೆಯ ಮಗ ಉತ್ತಮಕುಮಾರ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕೆಂದು ಕನಸು ಕಟ್ಟಿದರು. ಇದಕ್ಕಾಗಿ ಹಗಲಿರುಳು ಕಲಾವೃತ್ತಿಯಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯವಾಗಿತ್ತು.

ಶ್ರೀ ಸದಾಶಿವ ಪೇಂಟರ್ ಹತ್ತಿರ ಬೋರ್ಡ್ ಹಾಗೂ ಬ್ಯಾನರ್‌ಗಳಿಗೆ ಚಿತ್ರ ಬರೆದುಕೊಡುವುದು ಇವರ ನೌಕರಿ. ತಿಂಗಳಿಗೆ 60 ರೂ. ಪಗಾರ ಕೊಡುತ್ತಿದ್ದರು. ಆ ಕಾಲದಲ್ಲಿ ಶಾಲೆಯ ಮಾಸ್ತರರಿಗೂ ಅಷ್ಟೇ ಪಗಾರ ಇತ್ತು. ಒಂದು ದಿವಸ ಕೆಲಸ ತಪ್ಪಿಸಿದರೆ ಆ ದಿನದ ಪಗಾರ ಕಟ್ ಮಾಡುತ್ತಿದ್ದರು. ಅಪ್ಪಾಸಾಹೇಬರು ಮನೆ ಮಾಡಿದ ಓಣಿಯಲ್ಲಿ ಪ್ರಭಾತ ಟಾಕೀಜ್ ಇತ್ತು. “ಕಾಳಾಪಾಣಿ” ಸಿನೇಮಾ ಬರುವುದಿತ್ತು. ಇದರಲ್ಲಿ ದೇವಾನಂದ, ಮಧುಬಾಲಾ ಇವರದು ಪ್ರಮುಖ ಪಾತ್ರ. ಕಾಳಾಪಾಣಿ ಸಿನೇಮಾಗೆ ದೇವಾನಂದರ ದೊಡ್ಡದಾದ ಬ್ಯಾನರ್ ಕಟೌಟ್ ಮಾಡಿದೆ. ಎಲ್ಲಾ ಜನರೂ ಮೆಚ್ಚಿಕೊಂಡರು. ಸಿನೇಮಾ ಕಟೌಟ್ ಆರ್ಡರ್ ಬರಲು ಪ್ರಾರಂಭಿಸಿದವು. ಯುವಕ ಅಪ್ಪಾಸಾಹೇಬರ ಜನಪ್ರಿಯತೆಯನ್ನು ಕಂಡು ಸದಾಶಿವ ಪೇಂಟರ್ ಇವರನ್ನು ಕೆಲಸದಿಂದ ತೆಗೆದರು. ಇಷ್ಟೊತ್ತಿಗೆ ಅಪ್ಪಾಸಾಹೇಬ ಗಂಡು ಮಗುವಿನ ತಂದೆಯಾಗಿದ್ದರು. ಇದರಿಂದ ಸಂಸಾರದ ಜವಾಬ್ದಾರಿ ಮತ್ತಷ್ಟು ಹೆಚ್ಚಿತು.

ನಿಪ್ಪಾಣಿಯ ಮತ್ತೊಬ್ಬ ಕಲಾವಿದರಾದ ರಾಮು ಪೇಂಟರ್‌ರಿಗೆ ಅಪ್ಪಾಸಾಹೇಬರ ಚಿತ್ರಕಲೆಯ ಜನಪ್ರಿಯತೆ ತಿಳಿದು ತಮ್ಮಲ್ಲಿ ಬರಲು ಕೇಳಿದರು. ತಿಂಗಳಿಗೆ ಮೊದಲಿನಷ್ಟೇ ಸಂಬಳದ ಜೊತೆಗೆ ಹೊರಗಿನ ಸಿನೇಮಾ ಬ್ಯಾನರ್ ಅಥವಾ ಯಾವುದೇ ಬೇರೆ ಕೆಲಸ ಮಾಡಬಹುದು ಎಂದು ತಿಳಿಸಿದರು. ಇದರಿಂದ ಸಂತೋಷಗೊಂಡ ಅಪ್ಪಾಸಾಹೇಬ ಕೆಲಸಕ್ಕೆ ಸೇರಿಕೊಂಡನು.

ಇದೇ ಸಮಯಕ್ಕೆ ನಿಪ್ಪಾಣಿಗೆ ಏಣಗಿ ಬಾಳಪ್ಪನವರ ಕಂಪನಿ ಬಂದಿತು. ಬಾಳಪ್ಪನವರ ಪರಿಚಯವಾಯಿತು. ತಮ್ಮ ನಾಟಕಗಳಿಗೆ ಇವರಿಂದ ಬ್ಯಾನರ್, ಕಟೌಟ್‌ಗಳನ್ನು ಮಾಡಿಸಿದರು. ಹೀಗೆ ಸುಖಮಯ ಸಂಸಾರ ಸಾಗುತ್ತಿರಲು ಅಪ್ಪಾಸಾಹೇಬರವರ ಹೆಂಡತಿಗೆ ಮೆದುಳಿನ ರೋಗದ ನಿಮಿತ್ಯ ಆಸ್ಪತ್ರೆಗೆ ದಾಖಲು ಮಾಡಿದರು. ನಿಪ್ಪಾಣಿಯ ವೈದ್ಯರು ಮುಂದಿನ ಚಿಕಿತ್ಸೆಗೆ ಕೊಲ್ಹಾಪೂರಕ್ಕೆ ತುರ್ತು ಚಿಕಿತ್ಸೆಗೆ ತೆಗೆದುಕೊಂಡು ಹೋಗಲು ಸಲಹೆ ಮಾಡಿದರು. ಇದರಿಂದ ಗಾಬರಿಗೊಂಡ ಅಪ್ಪಾಸಾಹೇಬರಿಗೆ ದಿಕ್ಕೆ ತೋಚದಂತಾಯಿತು. ಮಿತ್ರರ ಸಹಕಾರದೊಂದಿಗೆ ಕೊಲ್ಹಾಪೂರ ಆಸ್ಪತ್ರೆಗೆ ದಾಖಲು ಮಾಡಿದರು. ಆದರೆ ಚಿಕಿತ್ಸೆಯು ಫಲ ನೀಡಲಿಲ್ಲ. ಇನ್ನು ಕೆಲವೇ ಗಂಟೆಗಳು ಮಾತ್ರ ಬದುಕುತ್ತಾಳೆ ಎಂದು ವೈದ್ಯರು ತಿಳಿಸಿದಾಗ ಕಾಡಾಪೂರಕ್ಕೆ ಕರೆದುಕೊಂಡು ಬಂದರು. ವಿಮಲಾ ತನ್ನ ಕರುಳಿನ ಕುಡಿಗಳಾದ ಚಕ್ರವರ್ತಿ, ಸುಶೀಲಾ, ಉತ್ತಮಕುಮಾರ ಹಾಗೂ ಗಂಡನನ್ನು ಕಣ್ತುಂಬಾ ನೋಡುತ್ತಾ ಕೊನೆಯುಸಿರೆಳೆದಳು. ಈ ತೀವ್ರ ಆಘಾತದಿಂದ ಚೇತರಿಸಿಕೊಳ್ಳಲು ಸಾಕಷ್ಟು ದಿನಗಳು ಹಿಡಿದವು. ಆದರೂ ಸಂಸಾರ ಸಾಗಿಸಲೇಬೇಕಲ್ಲವೇ. ದುಃಖವನ್ನು ತಡೆದು ಧೈರ್ಯ ತಂದುಕೊಂಡರು. ಹೆಂಡತಿಯ ನೋವನ್ನು ಕವನದಲ್ಲಿ ತೋಡಿಕೊಂಡರು. ಅಪ್ಪಾಸಾಹೇಬರು ಕಲೆಯೇ ನನ್ನ ಉಸಿರು, ಅದರಲ್ಲೇ ನಾನು ಯಶ ಕಾಣಬೇಕು ಎಂದು ದೃಢ ಸಂಕಲ್ಪದಿಂದ ಮುನ್ನುಗ್ಗಿದರು, ಅದರಲ್ಲಿ ಯಶಸ್ಸನ್ನು ಕಂಡುಕೊಂಡಿದ್ದಾರೆ. ಪ್ರೀತಿಯ ಮಡದಿಯ ಸಾವಿನಿಂದ ಧೃತಿಗೆಡದೆ, ತಂದೆಯವರ ಪ್ರಭಾವದಿಂದ ಬಂದ ಆಧ್ಯಾತ್ಮ ಸುಖದಿಂದ ದುಃಖವನ್ನು ಮರೆತರು. "ಪ್ರತಿಯೊಂದರಲ್ಲಿ ಸುಖ ದುಃಖ ಸಮಾನ ನೋಡುವ ಸಲುವಾಗಿ, ಮನುಷ್ಯನಲ್ಲಿ ಆಧ್ಯಾತ್ಮ ಇತ್ತಂದ್ರ ಆನಂದ ಪಡ್ತಾನ, ಆನಂದ ಪಡಬೇಕಾದರೆ ಆಧ್ಯಾತ್ಮ ಇದು ಬಹಳ ಮಹತ್ವದ್ದು. ಈಗ ನೋಡ್ರಿ ನನ್ನ ಹೆಂಡತಿ ತೀರ್ಕೊಂಡ ಮೇಲೆ ದಾರೂ ಕುಡಿಬಹುದಿತ್ತು, ಗಾಂಜ ಸೇದಬಹುದಿತ್ತು ಆದರೆ ಯಾವ ಯಾವು ಮಾಡಾಕ ನಾ ಹೋಗಲಿಲ್ಲ. ಕಾರಣ ಆಧ್ಯಾತ್ಮ ತಿಳುವಳಿಕೆ ನನ್ನಲ್ಲಿತ್ತು. ನನ್ನ ಪ್ರತಿಯೊಂದು ಚಿತ್ರದಲ್ಲಿಯೂ ಆಧ್ಯಾತ್ಮ ಇತ್ತು" ಎಂದು ಅಪ್ಪಾಸಾಹೇಬರು ಹೇಳುತ್ತಾರೆ.

ಹೀಗೆ ದುಃಖವ ಮರೆತು, ಕೆಲಸಕ್ಕಾಗಿ ಎಲ್ಲ ಕಡೆಗೆ ತಿರುಗಾಡುತ್ತಿದ್ದರು. ಜೊತೆಗೆ ಮಕ್ಕಳ ವಿದ್ಯಾಭ್ಯಾಸ, ಅವರನ್ನು ನೋಡಿಕೊಳ್ಳುವುದು, ಹೀಗೆ ತಮಗೆ ಎದುರಾದ ಕಷ್ಟಗಳನ್ನು ಧೈರ್ಯದಿಂದ ಎದುರಿಸಿದರು. ತಂದೆ, ತಾಯಿ, ಮಿತ್ರರು ಇನ್ನೊಂದು ಮದುವೆ ಆಗಬೇಕೆಂದು ಒತ್ತಾಯ ಹೇರಿದರು. "ಅಪ್ಪಾಸಾಹೇಬ

ನಿಮ್ಮ ವಯಸ್ಸು ಈಗ 28. ಇನ್ನೊಂದು ಮದುವೆ ಯಾಕೆ ಆಗಬಾರದು? ಮಕ್ಕಳಿಗೆ ಆಸರೆ ಆಗುತ್ತದೆ. ನಿನ್ನ ಮನೆ ಜವಾಬ್ದಾರಿ ಕಡಿಮೆ ಆಗುತ್ತದೆ" ಎಂದು ಎಲ್ಲ ಹಿರಿಯರು ಒತ್ತಾಯ ಮಾಡಿ ಮಿರಜದ ಕನ್ಯೆಯನ್ನು ನೋಡಿಬಂದರು. ಶ್ರೀ ಯಶವಂತ ಗೋಪಾಳಪ್ಪಾ ಸುತಾರ ಎಂಬುವವರ ಮಗಳು ಸಿಂಧೂ. ತಂದೆ ತಾಯಿ ಎಲ್ಲ ಹಿರಿಯರು ಒಪ್ಪಿಗೆ ಮೇರೆಗೆ ಸರಳ ರೀತಿಯಿಂದ ವಿವಾಹ ನೆರವೇರಿತು.

ಶ್ರೀಮತಿ ಸಿಂಧೂ ಅವರಿಗೆ ಮಕ್ಕಳಾಗಿಲ್ಲ. ಆದರೆ ಮೊದಲ ಹೆಂಡತಿಯ ಮಕ್ಕಳಾದ ಚಕ್ರವರ್ತಿ, ಸುಶೀಲಾ, ಉತ್ತಮಕುಮಾರ ಅವರನ್ನೇ ತನ್ನ ಮಕ್ಕಳೆಂದು ತಿಳಿದು ಜೋಪಾನ ಮಾಡಿದಳು. ಮೂವರು ಮಕ್ಕಳು ಅಷ್ಟೆ. "ಮೊದಲಿನ ತಾಯಿ ನಮಗೆ ಜನ್ಮ ನೀಡಿದರೆ, ಈ ಮಾತೆ ನಮ್ಮನ್ನು ಮಾತೃವಾತ್ಸಲ್ಯದಿಂದ ಸಾಕಿದಳು. ನಮಗೆ ತಾಯಿಯ ನೆನಪು ಬರದಂತೆ ನೋಡಿಕೊಂಡಳು". ಎಂದು ಎಲ್ಲ ಮಕ್ಕಳು ಶ್ರೀಮತಿ ಸಿಂಧೂ ಅವರನ್ನು ಗೌರವಿಸುತ್ತಾರೆ. ಸೊಸೆಯಂದಿರು ಹಾಗೂ ಮೊಮ್ಮಕ್ಕಳಾದ ಕೀರ್ತಿ, ನಂದೇಶ, ಅನಂತ, ಮಹೇಶ ಅಜ್ಜ ಆಯಿಯರನ್ನು ಗೌರವದಿಂದ ನೋಡಿಕೊಳ್ಳುತ್ತಾರೆ.

ವೃತ್ತಿ ಜೀವನ :

ಸ್ವಂತ ಊರಾದ ಕಾಡಾಪೂರ ಇವರ ಕಾರ್ಯಕ್ಷಮತೆಗೆ ಚಿಕ್ಕದಾಯಿತು. ನಗರದ ಕಡೆಗೆ ಮುಖ ಮಾಡಿದರು. ನಿಪ್ಪಾಣಿಗೆ ಬಂದರು. ಚಿತ್ರಕಲೆಯ ಜೊತೆಗೆ ಗ್ರಾಹಕ ಬಯಸಿದ್ದನ್ನು, ಹೇಳಿದ್ದನ್ನು ಮಾಡಿದರು. ಬೆಳ್ಳಿ, ಬಂಗಾರ, ಕಲ್ಲು, ಮಣ್ಣು, ಕಟ್ಟಿಗೆ, ಪಂಚಧಾತು ಹೀಗೆ ಯಾವುದೇ ಮಾಧ್ಯಮ ಬಯಸಿದರೂ ಅದನ್ನು ಮಾಡಿಕೊಟ್ಟರು. ದೇವರ ಫೋಟೋಗಳು, ರಾಜಕಾರಣಿಗಳ ಭಾವಚಿತ್ರಗಳು ಜನಸಾಮಾನ್ಯರ ಭಾವಚಿತ್ರಗಳು, ಸಾಂದರ್ಭಿಕ ಚಿತ್ರಗಳು, ನಾಟಕದ ಪರದೆಗಳು, ನಾಟಕಗಳ ಸನ್ನಿವೇಶ ತಕ್ಕ ಕಲಾ ನಿರ್ದೇಶನ, ಸೆಟ್‌ಗಳ ರಚನೆಯನ್ನು ಮಾಡಿದರು. ಹೀಗಾಗಿ ಇವರು ಬಹು ಬೇಗನೆ ಜನಪ್ರಿಯರಾದರು. ನಾಟಕಗಳಲ್ಲಿಯ ಸಿಂಹಾಸನ, ಕಿರೀಟಗಳನ್ನು ಮಾಡಿದರು. ಯಾವುದೇ ಕೆಲಸ ತಿರಸ್ಕರಿಸದೇ ಬಂದ ಕೆಲಸದಲ್ಲಿ ತನ್ಮಯರಾಗಿ ಕೆಲಸ ಮಾಡಿದರು. 1954 ರಲ್ಲಿ ನಿಪ್ಪಾಣಿಯಲ್ಲಿದ್ದಾಗ ಕುಸನಾಳ ಗ್ರಾಮದವರು ಬಂದು ಲಕ್ಷ್ಮೀ ದೇವರ ಗುಡಿಗೆ (ಲಗಮವ್ವಾ) ಹಿತ್ತಾಳೆ ಚೌಕಟ್ಟನ್ನು ಮಾಡಲು ಕೆಲಸ ಕೊಟ್ಟರು. ಆಗ ಇವರಿಗೆ 18 ವರ್ಷ. ಕೆಲಸ ಪೂರ್ಣವಾದಾಗ ಬಂದು ನೋಡಿದರು. ಖುಷಿಯಾದರು. ಇವರಿಗೆ ಸತ್ಕರಿಸಿದರು.

ತಮ್ಮನ ಮದುವೆ ಸಲುವಾಗಿ ಕಾಡಾಪೂರಕ್ಕೆ ಚಿಂಚಣಿ ಶ್ರೀ ತಾತಾಸಾಹೇಬ ಪಾಟೀಲ ಇವರ ಮದುವೆಗೆ ಬಂದಾಗ ಅಲಖನೂರ ಗ್ರಾಮದವರು ಮದುವೆಯಲ್ಲಿ ಡೊಳ್ಳಿನ ಪದಗಳನ್ನು ಹಾಡಲು ಬಂದಿದ್ದರು. ಅಪ್ಪಾಸಾಹೇಬರ ಕಲಾಕೃತಿಗಳನ್ನು ನೋಡಿದರು. ತಮ್ಮ ಊರಿನ 'ಕರಿಸಿದ್ಧೇಶ್ವರ' ದೇವರ ಗುಡಿಯಲ್ಲಿ ಕೃತಿ ರಚಿಸಲು ಆಹ್ವಾನಿಸಿದರು. ಅದರಂತೆ ಅಪ್ಪಾಸಾಹೇಬರು ಗುಡಿಗೆ ಹೋಗಿ ಮೊದಲ ಅಂತಸ್ತಿನ ಪವಳಿಯಲ್ಲಿ ಸುಮಾರು 50 ರಿಂದ 60 ಪೇಂಟಿಂಗ್‌ಗಳನ್ನು ಮಾಡಿದರು. ಇವು ಸುಮಾರು 1954–55 ರ ಅವಧಿಯಲ್ಲಿ ಮಾಡಿದ್ದರಿಂದ ಕಾರ್ಯಕ್ಷೇತ್ರಕ್ಕೆಂದು ಆಲಖನೂರಿಗೆ ಹೋದಾಗ ಅವುಗಳ ಮೇಲೆ ಮತ್ತೆ ಬೇರೆಯವರಿಂದ ಪೇಂಟಿಂಗ್ ಮಾಡಿಸಿದ್ದಾರೆ. ಚಿತ್ರಗಳು ಸ್ವಲ್ಪ ಮಸುಕಾದರೆ ಮತ್ತೆ ಅವುಗಳ ಮೇಲೆ ಹೊಸ ಪೇಂಟಿಂಗ್ ಮಾಡಿಸುತ್ತೇವೆ ಎಂದು ಗ್ರಾಮಸ್ಥರು ತಿಳಿಸಿದರು. ಹೀಗೆ ಅಪ್ಪಾಸಾಹೇಬರು ಅನೇಕ ಗುಡಿಗಳಿಗೆ ರಚಿಸಿದ ಚಿತ್ರಗಳು ಈಗ ನೋಡಲು ಸಿಗುವುದಿಲ್ಲ.

1956 ಜನವರಿ ತಿಂಗಳಲ್ಲಿ ಮುಂಬೈನ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಚಿತ್ರಕಲಾ ಪ್ರದರ್ಶನ ಇರುವುದು ಯುವಕ ಅಪ್ಪಾಸಾಹೇಬರಿಗೆ ತಿಳಿಯಿತು. ಪ್ರದರ್ಶನ ನೋಡುವುದಾಗಿ ನಿಶ್ಚಯಿಸಿ ಹೋಗಿಯೇ ಬಿಟ್ಟರು. ಜೆ. ಜೆ. ಕಲಾ ಶಾಲೆಯ ಪ್ರದರ್ಶನ ವೀಕ್ಷಿಸಿ ಸಂತೋಷಪಟ್ಟರು. ಮರುದಿನ ಮುಂಬೈನಲ್ಲಿ ಚಳುವಳಿ ಸಲುವಾಗಿ ಊರಿಗೆ ಬರುವ ದಾರಿಯು ಬಂದ್ ಆಯಿತು. ಏಕೆಂದರೆ ಆಗ ಮುಂಬೈ ಸ್ವತಂತ್ರವಿತ್ತು. ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಚಳುವಳಿಗಾರರ ಬೇಡಿಕೆಯಾಗಿತ್ತು. ಹೀಗಾಗಿ ವಿಧಿಯಿಲ್ಲದೆ ಅಪ್ಪಾಸಾಹೇಬರು ಬಾಂಬೆಯಲ್ಲಿ ಉಳಿಯಬೇಕಾಯಿತು. ಈ ಸಮಯದಲ್ಲಿ ಬಾಂಬೆಯ ರಾಜಕಮಲ್ ಸ್ಟುಡಿಯೋಗೆ ಭೇಟಿಕೊಟ್ಟರು. ಅಲ್ಲಿ ಜಿ. ಕಾಂಬಳೆ, ಮಧುಕರ, ಓಪಳೆಕರ, ಪಿ. ಸರದಾರ್, ಎಂ. ಡಿ. ರಾವಳ, ಬಸಂತ ಕಾಂಬಳೆ, ಶಾಮಕಾಂತ ಜಾಧವ ಹೀಗೆ ಸ್ಟುಡಿಯೋದಲ್ಲಿ ಕೆಲಸ ಮಾಡಿರುವ ಇವರನ್ನು ಪರಿಚಯ ಮಾಡಿಕೊಂಡರು. ಬ್ಯಾನರ್ ಪೇಂಟಿಂಗ್ ಕೆಲವು ಚಿತ್ರಗಳನ್ನು ತಿಳಿದುಕೊಂಡರು. ಮುಂಬೈಯಲ್ಲಿ ತಿರುಗಾಡಿ ಊರಿಗೆ ಮರಳಿ ಬಂದರು.

ನಿಪ್ಪಾಣಿಯ ಸದಾಶಿವ ಪೇಂಟರ್ ಪುಡಾರಿ ಪೇಪರ್‌ನಲ್ಲಿ ಚಿತ್ರ ತೆಗೆಯುವ ಕಲಾವಿದರು ಬೇಕಾಗಿದ್ದಾರೆ ಎಂದು ಜಾಹೀರಾತು ನೋಡಿ, ನಿಪ್ಪಾಣಿಗೆ ಹೋದರು. ಸ್ವಲ್ಪ ದಿನ ಅವರ ಹತ್ತಿರ ಕೆಲಸ ಮಾಡಿದರು. ನಂತರ ಬೆಳಗಾವಿಯ ಹರಿಹರ

ಆರ್ಟ್ಸ್‌ರವರ ಹತ್ತಿರ ಕೆಲವು ದಿನ ಕೆಲಸ ಮಾಡಿದರು. ಈಚಲಕರಂಜಿಯಲ್ಲಿ ಶ್ರೀ ಏಣಗಿ ಬಾಳಪ್ಪನವರು ನಾಟಕ ಕ್ಯಾಂಪ್ ಹಾಕಿದ್ದರು. ಅವರ ಕರೆಯ ಮೇರೆಗೆ ಹೋಗಿ ನಾಟಕಗಳಿಗೆ ಬ್ಯಾನರ್ ಕೆಲಸ ಪ್ರಾರಂಭಿಸಿದರು. ನಾಟಕ ಕಂಪನಿ ಕೆಲಸ ಮುಗಿದ ಮೇಲೆ ನಿಪ್ಪಾಣಿಗೆ ಮರಳಿ ಬಂದು ಶ್ರೀ ರಾಮ ಪೇಂಟರ್ ಹತ್ತಿರ ನಾಲ್ಕು ಜನ ಪಾಲುದಾರಿಕೆಯೊಂದಿಗೆ ಮಂಟಪ ಡೆಕ್ಯೂರೇಷನ್ ಪ್ರಾರಂಭಿಸಿದರು. ರಾಮ ಪೇಂಟರ್, ಪ್ರಭಾಕರ ಪೇಂಟರ್, ಬಾಬುರಾವ್ ಭೂಪೇ ಪೇಂಟರ್ ಹಾಗೂ ಅಪ್ಪಾಸಾಹೇಬ ಹೀಗೆ ನಾಲ್ಕು ಜನ ಪಾಲುದಾರರು ಇದ್ದರು. ಇದರ ಮುಖ್ಯ ನಿರ್ವಹಣೆ ಅಪ್ಪಾಸಾಹೇಬ ಅವರದಾಗಿತ್ತು.

ಶ್ರೀ ಅಪ್ಪಾಸಾಹೇಬರ ಪೇಂಟಿಂಗ್ಸ್‌ಗಳನ್ನು ನೋಡಿದ ಸಿನೇಮಾ ನಿರ್ಮಾಪಕರಾದ ಶ್ರೀ ಅನಂತ ಮಾಣೆ ಅಪ್ಪಾಸಾಹೇಬರ ಕೆಲಸದ ಮೇಲೆ ಖುಷಿ ಪಟ್ಟು ಕೊಲ್ಹಾಪೂರಕ್ಕೆ ಶುಗರ್ ಮಿಲ್ಲ್‌ದ ವತಿಯಿಂದ ನಡೆಸುತ್ತಿದ್ದ 'ಜೀವನ ಕಲ್ಯಾಣ' ನಾಟಕ ಸಂಸ್ಥೆಯ ಪೇಂಟಿಂಗ್ ಮಾಡಲು ಶ್ರೀ ವಿಠ್ಠಲರಾವ ನಾಗೇಶಕರ ದಾದ ಇವರು ಅಪ್ಪಾಸಾಹೇಬರನ್ನು ಕರೆಸಿಕೊಂಡರು. ಜೀವನ ಕಲ್ಯಾಣ ಸಂಸ್ಥೆಗೆ 20ವರ್ಷಗಳ ಕಾಲ ಕೆಲಸ ಮಾಡಿದರು. ಪ್ರತಿವರ್ಷ ಗಣೇಶ ಉತ್ಸವಕ್ಕೆ ಹೊಸ ಹೊಸ ನಾಟಕಗಳನ್ನು ಆಡಿಸುತ್ತಿದ್ದರು. ಹೀಗಾಗಿ ಅಪ್ಪಾಸಾಹೇಬರು ವರ್ಷದಲ್ಲಿ 2ತಿಂಗಳು ಈ ಸಂಸ್ಥೆಯಲ್ಲಿಯೇ ಕೆಲಸ ಮಾಡುತ್ತಿದ್ದರು. ಈ ಸಂಸ್ಥೆಯ ಪ್ರಸಿದ್ಧ ನಾಟಕಗಳಾದ ಸಂಗೀತ ಸ್ವಯಂವರ, ಸಂಗೀತ ಸುಭದ್ರ ಮುಂತಾದ ಅನೇಕ ನಾಟಕಗಳಿಗೆ ಅಪ್ಪಾಸಾಹೇಬರು ಕೆಲಸ ಮಾಡಿದ್ದಾರೆ.

'ಜೀವನ ಕಲ್ಯಾಣ' ನಾಟ್ಯ ಸಂಸ್ಥೆಗೆ ಸಾಕಷ್ಟು ಕೆಲಸ ಮಾಡಿದರು. ತಮ್ಮ ಜೀವನದ ಬಹುಭಾಗವನ್ನು ಈ ಸಂಸ್ಥೆಯ ಕೆಲಸಕ್ಕಾಗಿ ಕಳೆದರು. ನಾಟ್ಯ ಸಂಘದ ಇತರ ಕಲಾವಿದರು ಇವರನ್ನು ಆದರದಿಂದ ಕಂಡರು. 'ನಾನೊಬ್ಬ ಕನ್ನಡ ಕಲಾವಿದ, ನಾನು ಮರಾಠಿ ಮಾತನಾಡುವಾಗ, ಈತ ಕನ್ನಡಿಗ ಎಂದು ತಿಳಿಯುತ್ತಿತ್ತು. ಆದರೂ ನನ್ನನ್ನು ಪ್ರೀತಿಸುತ್ತಿದ್ದರು. ಯಾರೂ ನನ್ನನ್ನು ದ್ವೇಷಿಸಲಿಲ್ಲ. ಎಲ್ಲರೂ ಪ್ರೀತಿಸಿದರು. ಅಲ್ಲಿ ಬಹಳ ದೊಡ್ಡ ದೊಡ್ಡ ಕಲಾವಂತರೂ ಭೇಟಿಯಾದರು. ಅವರ ಸಂಗಡ ಕೆಲಸ ಮಾಡುವ ಭಾಗ್ಯ ದೊರೆಯಿತು. ಬಾಲಗಂಧರ್ವ ಕಾಲದವರು ಶಂಕರರಾವ ಶಿರೋಳಕರ ಉತ್ತರಕರ ಅವರು ಮದ್ರಾಸ್ ಜೆಮಿನಿ ಸ್ಟುಡಿಯೋದಲ್ಲಿ ಕೆಲಸ ಮಾಡಿದವರು. ಅನಂತ ಚವ್ಹಾಣ

ಇವರು ಶಿವರಾಮ ಮೋದಿಯವರ ಸ್ಟುಡಿಯೋದಲ್ಲಿ ಕೆಲಸ ಮಾಡಿದವರು. ಕಲಾ ನಿರ್ದೇಶಕ ಬಳರಾಮ ಬೇಡಕರ ಮತ್ತು ಬಾಪೂ ಸಾಹೇಬ ಪೋವಾರ ಇವರು ಮಹಾದೇವ ಕದಮ ಸ್ಟುಡಿಯೋದಲ್ಲಿ ಕೆಲಸ ಮಾಡಿದವರು. ಟಿ. ಕೆ. ವಡನಗೇಕರ ಇವರು ಕೆ. ಆಸಿಫ್ ಇವರ 'ಮೊಗಲೆ ಅಜಮ್'ದಲ್ಲಿ ಕೆಲಸ ಮಾಡಿದವರು. ಈ ಎಲ್ಲ ಕಲಾವಂತರ ಸಂಗಡ ಕೆಲಸ ಮಾಡೋ ಭಾಗ್ಯ ದೊರಯಿತು. ಇವರೆಲ್ಲರೂ ನನ್ನ ಮೇಲೆ, ನನ್ನ ಕೆಲಸದ ಮೇಲೆ ಬಹಳ ಪ್ರೇಮ ಮಾಡಿದರು. ಹೀಗೆ ಅನೇಕ ಹಿರಿಯ ಕಲಾವಿದರ ಜೊತೆ ಕೆಲಸ ಮಾಡಿ ಅವರಿಂದ ಸಾಕಷ್ಟು ಕಲಿತೇನು ಎಂದು ಅಪ್ಪಾಸಾಹೇಬರು ಹೇಳುತ್ತಾರೆ.

ಮೂಲತಃ ನಿಪ್ಪಾಣಿ ತಂಬಾಕು ಬೆಳೆಯುವುದರಲ್ಲಿ ಪ್ರಸಿದ್ಧವಾಗಿತ್ತು. ಹೀಗಾಗಿ ತಂಬಾಕು ಖರೀದಿಸಲು ಬೇರೆ ಬೇರೆ ರಾಜ್ಯಗಳಿಂದ ಶ್ರೀಮಂತರು, ಕಲಾಸಕ್ತರು ಬರುತ್ತಿದ್ದರು. ಹೀಗೆ ಬಂದವರಲ್ಲಿ ಸಾಕಷ್ಟು ಜನ ಅಪ್ಪಾಸಾಹೇಬರಿಂದ ಕೃತಿಗಳನ್ನು ಮಾಡಿಸಿಕೊಂಡು ಹೋಗಿದ್ದಾರೆ. 5 ನಂಬರ್ ಬೀಡಿ ಫ್ಯಾಕ್ಟರಿ ತ್ರಿವೇಂದ್ರಂನವರು ಇವರಿಂದ ಬೆಳ್ಳಿ ಹಾಗೂ ಬಂಗಾರ ಪಾಲಿಷ್ ಎಂಬೋಸಿಂಗ್ ಮಾಡಿಸಿಕೊಂಡು ಹೋಗಿದ್ದಾರೆ. ನಿಪ್ಪಾಣಿಯ ಭೋದಿ ಚಿನ್ಹೆ ತಂಬಾಕು ಗಿಡ ಬೆಳ್ಳಿಯಲ್ಲಿ ಮಾಡಿಸಿಕೊಟ್ಟಿದ್ದಾರೆ. ಅಲ್ಲದೆ ಇಲ್ಲಿಯ ಬೀಡಿ ಕಂಪನಿಯವರು ಇವರನ್ನು ಶಿವಕಾಶಿಯ ಓರಿಯಂಟಲ್ ಪ್ರಿಂಟಿಂಗ್ ಪ್ರೆಸ್‌ಗೆ ಪೋಸ್ಟರಗಳನ್ನು ಮಾಡಿಕೊಡಲು ಕಳುಹಿಸಿದ್ದರು. ಹೀಗಾಗಿ ಶಿವಕಾಶಿಗೆ ಸಾಕಷ್ಟು ಕೆಲಸ ಮಾಡಿಕೊಟ್ಟು ಬಂದಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಪಿ. ಆರ್. ತಿಪ್ಪೇಸ್ವಾಮಿಯವರು ಅಪ್ಪಾಸಾಹೇಬ ಕಾಡಾಪೂರಕರರವರ ಜನಪ್ರೀಯತೆಯನ್ನು ಕೇಳಿ ನಿಪ್ಪಾಣಿಯ ಅವರ ಮನೆಗೆ 1993ರಲ್ಲಿ ಭೇಟಿ ನೀಡಿದರು. "ನಾವು ಕಲಾವಿದ ಎಸ್. ಅಪ್ಪಾಸಾಹೇಬ ಕಾಡಾಪೂರಕರ ಅವರ ಮನೆಗೆ ಬಂದೆವು. ಅಲ್ಲಿ ಅವರು ರಚಿಸಿದ ಚಿತ್ರ ಶಿಲ್ಪಗಳನ್ನು ಗಮನಿಸಿದೆ ಈತ ಅಪರೂಪದ ಕಲಾಕಾರ 72ವಯಸ್ಸಿನವ ಈ ತನಕ ಈತನ ಬಗ್ಗೆ ಯಾರೂ ಬರೆದಿಲ್ಲ. ಎಲ್ಲೂ ಬಂದಿಲ್ಲ. ಇವ ಕನ್ನಡಿಗ ಎಂದು ಮರಾಠಿಗರು, ಇವ ಮರಾಠಕ್ಕೆ ಹೋಗುವವ ಎಂದು ಕನ್ನಡಿಗರು ಹೀಗಾಗಿ ಗುಪ್ತಗಾಮಿನಿಯಾಗಿ ಅಪರಿಚಿತನಾಗಿ ಉಳಿದಿದ್ದಾನೆ. ನನಗೆ ನೋವಾಯಿತು. ಶಿಲ್ಪಿ ಅಪ್ಪಾಸಾಹೇಬರ ಕುಶಲಗಾರಿಕೆಗೆ ಮನ ಸೋತು ಅವರನ್ನು ಅಭಿನಂದಿಸಿ ಹೊರ ಬಂದೆವು" ಎಂದು ದಿನಾಂಕ 14-03-1993 ರಂದು ಕನ್ನಡಮ್ಮ ದಿನಪತ್ರಿಕೆಯಲ್ಲಿ ಪ್ರಕಟಗೊಂಡ "ನಿಪ್ಪಾಣಿ ಕಲೆ, ಕಲಾವಿದರ ಶೋಧ" ಎಂದು ಲೇಖನದಲ್ಲಿ ಬರೆದಿದ್ದಾರೆ.

ವರ್ಣ ಚಿತ್ರಗಳು :

ಅಪ್ಪಾಸಾಹೇಬರು ದೃಶ್ಯಕಲೆಯ ಯಾವುದೇ ಕಲಾ ಶಿಕ್ಷಣ, ಪದವಿ ಪಡೆಯಲಿಲ್ಲ, ಆದರೆ ಬದುಕಿನ ಹೋರಾಟದಲ್ಲಿ ಚಿತ್ರಕಲಾ .ವೃತ್ತಿ ಇವರಿಗೆ ನೆರವು ನೀಡಿತು. ಈ ಹೋರಾಟದಲ್ಲಿ ಸ್ವಯಂ ಚಿತ್ರಕಲೆಯ ಅನುಭವ ಪಡೆದರು. ಸಿನೇಮಾ, ನಾಟಕದ ಬ್ಯಾನರುಗಳು, ನಾಟಕದ ಹಿಂದಿನ ಪರದೆಗಳ ಮೇಲೆ ಚಿತ್ರ ರಚನೆ, ಗುಡಿ ಗುಂಡಾರಗಳಿಗೆ ಧಾರ್ಮಿಕ ಚಿತ್ರಗಳನ್ನು ರಚಿಸುತ್ತಾ, ದೃಶ್ಯಕಲೆಯ ವ್ಯಾಕರಣ ತಿಳಿದುಕೊಂಡರು. ಕಲೆಯ ಮೇಲಿನ ಅವರ ಏಕನಿಷ್ಠೆಯಿಂದಾಗಿ ಚಿತ್ರ, ಶಿಲ್ಪ, ಕಲ್ಲು, ಮಣ್ಣು, ಬಂಗಾರ, ಬೆಳ್ಳಿಯಲ್ಲಿಯೂ ಕೆಲಸ ಮಾಡಿ ಸೈ ಎನಿಸಿಕೊಂಡರು. ತಮ್ಮ ಬಿಡುವಿನ ವೇಳೆಯಲ್ಲಿ ಸೃಜನಶೀಲ ಕೃತಿಗಳನ್ನು ರಚಿಸುವಲ್ಲಿಯೂ ಆಸಕ್ತಿ ತೋರಿಸಿದರು. ಈ ಮೂಲಕ ಏಕವ್ಯಕ್ತಿ, ಗುಂಪು ಪ್ರದರ್ಶನಗಳಲ್ಲಿ ಭಾಗವಹಿಸುತ್ತಾ ತಾವು ಒಬ್ಬ ಪ್ರಬುದ್ಧ ಕಲಾವಿದರಾಗಿ ರೂಪುಗೊಂಡರು.

ಅವರ ಬಹುಪಾಲ ಕಲಾಕೃತಿಗಳು ಆಧ್ಯಾತ್ಮದ ತಿರುಳನ್ನು ಒಳಗೊಂಡಿವೆ. ತಮ್ಮ ಅನುಭವಗಳನ್ನು ಬಣ್ಣದಲ್ಲಿ ಚಿತ್ರಿಸಿದ್ದಾರೆ. ನೋವು-ನಲಿವು, ಸುಖ, ಆದ್ಯಾತ್ಮದ ಸಂದೇಶ ಅವರ ಕೃತಿಗಳಲ್ಲಿದೆ. ಕೊರೆಯುವ ಚಳಿ, ಹಿಮ ಲೆಕ್ಕಿಸದೆ ದೇಶದ ರಕ್ಷಣೆಗಾಗಿ ಹೋರಾಡಿ ಪ್ರಾಣ ತೆತ್ತ ಯೋಧನಿಗಾಗಿ "ಕಾರ್ಗಿಲ್" ಶೀರ್ಷಿಕೆಯ ಕಲಾಕೃತಿ ರಚಿಸುವ ಮೂಲಕ ನಮನ ಸಲ್ಲಿಸಿದ್ದಾರೆ. ಚಿತ್ರದಲ್ಲಿ ಯೋಧನ ಕಾಲಲ್ಲಿಯ ಬೂಟುಗಳು ಮಾತ್ರ ಕಾಣಿಸುತ್ತಿದ್ದು ಮೃತದೇಹ ಸಂಪೂರ್ಣ ಹಿಮದಲ್ಲಿ ಮುಚ್ಚಿಕೊಂಡಿದೆ. ದೇಹದ ಮೇಲೆ ರಾಷ್ಟ್ರಧ್ವಜ ಹರಡಿದೆ. ಕಾಲಡಿಯಲ್ಲಿ ಹೂವುಗಳನ್ನು ಚಿತ್ರಿಸಿ ಯೋಧನಿಗಾಗಿ ದೇಶದ ಪರವಾಗಿ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಕಾರ್ಗಿಲ್ ಯುದ್ಧದ ದಶಮಾನೋತ್ಸವ ಆಚರಿಸುತ್ತಿರುವ ಈ ವರ್ಷದಲ್ಲಿ (2009) ಅಪ್ಪಾಸಾಹೇಬರ "ಕಾರ್ಗಿಲ್" ಕಲಾಕೃತಿಯನ್ನು ನೋಡಿದಾಗ ಯುದ್ಧದ ಭೀಕರತೆ ಅರಿವಾಗುತ್ತದೆ. ಅಕ್ಷರ ಮಟ್ಟಿಗೆ ಕಲಾಕೃತಿ ನೋಡುಗನ ಮನಸ್ಸನ್ನು ತಟ್ಟುತ್ತದೆ.

"ಪ್ರತಿಬಿಂಬ" ಶೀರ್ಷಿಕೆಯ ಅವರ ನೈಜ ಶೈಲಿಯ ಚಿತ್ರದಲ್ಲಿ ಯುವತಿಯ ಶೃಂಗಾರಮಯ ದೃಶ್ಯವನ್ನು ರಮ್ಯವಾಗಿ ಚಿತ್ರಿಸಿದ್ದಾರೆ. 19"ಘಿ25" ಅಳತೆಯ ಈ ಕಲಾಕೃತಿ ತೈಲವರ್ಣದಲ್ಲಿ ಚಿತ್ರಿಸಿದೆ. "ಸಾರಂಗ" ಶೀರ್ಷಿಕೆಯ ಇವರ ಇನ್ನೊಂದು ಕಲಾಕೃತಿಯಲ್ಲಿ ಅಂಧವ್ಯಕ್ತಿಯ ಸಂಗೀತ ಪ್ರತಿಭೆಯ ಬಗ್ಗೆ ಗಮನ ಸೆಳೆದಿದ್ದಾರೆ. ಅಂಧತ್ವ ಕಣ್ಣಿಗೆ ಹೊರತು ಪ್ರತಿಭೆಗೆ ಅಲ್ಲ ಎಂದು ಸೂಚ್ಯವಾಗಿ

ತೋರಿಸಿದ್ದಾರೆ. "ಸಂಗೀತ ವಿಶ್ವಭಾಷೆ" ಮತ್ತು "ಪಂಚಭೂತ" ಶೀರ್ಷಿಕೆ ಕಲಾಕೃತಿಯಲ್ಲಿ ಅವರು ಬಳಸಿದ ದೃಶ್ಯಭಾಷೆ ಅನನ್ಯವಾಗಿದೆ. ಯಾವುದೇ ಕಲಾವಿದರ ತಂತ್ರ, ಶೈಲಿ ಪ್ರಭಾವಕ್ಕೆ ಒಳಗಾಗದೆ ತಮ್ಮ ಅಭಿವ್ಯಕ್ತಿಗಳಿಗೆ ಬಣ್ಣದಲ್ಲಿ ಜೀವ ತುಂಬಿದ್ದಾರೆ. ಬಣ್ಣದಲ್ಲಿ ಸ್ವಚ್ಛಂದವಾಗಿ ಆಟವಾಡದೆ ಅಕಾಡೆಮಿಕ್ ಶೈಲಿಯಲ್ಲಿ ನೈಜವಾಗಿ, ರಮ್ಯವಾಗಿ ಇವರ ಕಲಾಕೃತಿಗಳು ರಚನೆಗೊಂಡಿವೆ. ಇದರಿಂದ ನೋಡುಗರಿಗೆ ಕಲಾಕೃತಿ ಸುಲಭವಾಗಿ ಅರ್ಥವಾಗುತ್ತದೆ. ಅವರ ಕಲಾಕೃತಿಗಳ ಭಾವನೆಗೆ ನೋಡುಗ ಹೊಂದಿಕೊಳ್ಳುತ್ತಾನೆ, ಕಲಾಕೃತಿಯಲ್ಲಿ ಒಂದಾಗುತ್ತಾನೆ. ಕ್ಯಾನವಾಸ ಅವಕಾಶದಲ್ಲಿ ಆಕೃತಿಗಳ ಹೊಂದಾಣಿಗೆ ಬಣ್ಣಗಳ ನೈಜತೆ, ನೆರಳು-ಬೆಳಕು, ಆಕೃತಿಗಳನ್ನು ಶರೀರ ಶಾಸ್ತ್ರದ ನಿಯಮಕ್ಕನುಗುಣವಾಗಿ ರಚನೆ ಮಾಡಿದ್ದಾರೆ. ಹೀಗಾಗಿ ಇವರ ಕಲಾಕೃತಿಗಳನ್ನು ಸಾಮಾನ್ಯ ನೋಡುಗನು ಮೆಚ್ಚಿಕೊಳ್ಳುತ್ತಾನೆ. ಡಿ-ಕನ್‌ಸ್ಟ್ರಕ್ಷನ್ ರೀತಿಯಲ್ಲಿ ನಿಯಮಗಳನ್ನು ಮೀರಿ ಕಲಾಕೃತಿ ರಚಿಸುವ ಸಾಹಸಕ್ಕೆ ಕೈ ಹಾಕಿಲ್ಲದಿರುವುದು ಅವರ ಕಲಾಕೃತಿಗಳನ್ನು ನೋಡಿದಾಗ ತಿಳಿಯುತ್ತದೆ.

ಮಿಥ್ಯ ವಸ್ತುವಿನಿಂದ ಸತ್ಯ ವಸ್ತುವಿನ ಜ್ಞಾನವಾಗಬೇಕು. ಸತ್ಯ ವಸ್ತುವಾದ ಪರಬ್ರಹ್ಮಕ್ಕೆ ಆಕಾರ ಇಲ್ಲ. ಕಣ್ಣಿಗೆ ಕಾಣುವ ಜಗತ್ತು ಮಿಥ್ಯ ಇದ್ದರೂ ಇದಕ್ಕೊಂದು ರೂಪ ಮತ್ತು ಆಕಾರವಿದೆ. ಅದು ಬ್ರಹ್ಮಜ್ಞಾನದ ಅರಿವು ಮೂಡಿಸುತ್ತದೆ. ಸೃಷ್ಠಿಯ ಎಲ್ಲದಕ್ಕೂ ಆಕಾರವಿದೆ, ಕಲ್ಪನೆಯಲ್ಲೂ ಆಕಾರವಿದೆ ಎಂದು ಹೇಳುವ ಅಪ್ಪಾಸಾಹೇಬರು ಚಿತ್ರಕಲೆಯಲ್ಲಿ 'ಆಕಾರ ಮಹಾನ್' ಸಿದ್ಧಾಂತವನ್ನು ಪ್ರತಿಪಾದಿಸಿದರು. ಆಕಾರಗಳ ಬಗೆಗೆ ಚಿಂತಿಸಿದರು, ಧ್ಯಾನಿಸಿದರು. ತಮಗೆ ಸಿಕ್ಕ ಅನೇಕ ಮಾಧ್ಯಮಗಳಲ್ಲಿ ಆಕಾರಗಳನ್ನು ಮೂರ್ತರೂಪಕ್ಕೆ ತಂದರು.

ಅಕಾಡೆಮಿಕ್ ನೆಲೆಯ ಕಲಾಕೃತಿಗಳನ್ನು ರಚಿಸುವ ಇವರು ನವ್ಯಕಲಾ ಪಂಥಗಳ ಬಗ್ಗೆ ಅಷ್ಟಾಗಿ ಗಮನ ನೀಡಲಿಲ್ಲ. "ನಾನು ಮಾಡರ್ನ್ ಆರ್ಟ್‌ಗೆ ಹೋಗಲಿಲ್ಲ. ನನ್ನ ಜೀವನ ಕಲೆಯ ಮೇಲೆ ನಿಂತಿದ್ದರಿಂದ ಸಾಮಾನ್ಯ ಜನರಿಗೂ ಚಿತ್ರ ತಿಳಿಯಬೇಕು. ಮಾಡರ್ನ್ ಆರ್ಟ್ ನನಗೂ ಸುದ್ದ ತಿಳಿಯುವುದಿಲ್ಲ. ಹೀಗಾಗಿ ಅದನ್ನು ಬಿಡಿಸುವ ಪ್ರಯತ್ನ ನಾ ಮಾಡಲಿಲ್ಲ" ಎನ್ನುತ್ತಾರೆ ಅಪ್ಪಾಸಾಹೇಬರು. ಇವರು ಹೆಚ್ಚಾಗಿ ನೈಜರೀತಿಯ ರಮ್ಯವಾದ ಶೈಲಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಮುಖ್ಯವಾಗಿ ರಾಜಾ ರವಿವರ್ಮ, ಎಸ್. ಎಂ. ಪಂಡಿತ ಮುಂತಾದವರ ಪ್ರಭಾವವನ್ನು ಇವರ ಕೃತಿಗಳಲ್ಲಿ ಗುರುತಿಸಬಹುದಾಗಿದೆ.

ಸೂರ್ಯ, ಚಂದ್ರ, ಮುಳಿ, ಗಿಡ ಮೊದಲೋ ಅಥವಾ ಬೀಜ ಮೊದಲೋ, ಕತ್ತಲೆಯಿಂದ ಪ್ರಕಾಶದತ್ತ ಹೋಗುತ್ತಾ, ಹೋಗುತ್ತಾ ಸ್ವಪ್ರಕಾಶಮಯವಾದುದರ ಪುಣ್ಯ ಬೆಳಕು, ಪರಿವರ್ತನೆ ಪ್ರಕೃತಿಯ ನಿಯಮದಂತೆ ಬಾಲ್ಯ, ಯೌವ್ವನ, ದುಃಖ, ವೃದ್ಧಾಪ್ಯ ಮುಂತಾದ ಇವರ ಕೃತಿಗಳು ಆಧ್ಯಾತ್ಮದ ಬೆಳಕನ್ನು ನೀಡುತ್ತವೆ. ಹೀಗೆ ಇವರು ತಮ್ಮಲ್ಲಿ ಉಂಟಾದ ಭಾವನೆಗಳನ್ನು ವರ್ಣಗಳ ಮೂಲಕ ಸೃಜನಾತ್ಮಕವಾಗಿ ತಂದು ಆ ಮೂಲಕ ನೋಡುಗರು ಆ ಕೃತಿಯಲ್ಲಿ ಒಂದಾಗುವಂತೆ ಮಾಡುತ್ತಾರೆ.

ಮಾನವ ಜೀವನಕ್ಕೆ ಒಂದು ಪ್ರಶ್ನೆ, ಪಂಚಭೂತ, ಸರ್ವಸಂಗ ಪರಿತ್ಯಾಗ, ಮುಂಜಾನೆಯ ಸಮಯ, ವಿಶ್ವದ ಶಬ್ದಸ್ವರ, ಮುಂತಾದ ಕೃತಿಗಳು ನೋಡುಗನನ್ನು ಸ್ವವಿಮರ್ಶೆಯಲ್ಲಿ ತೊಡಗಿಸುತ್ತದೆ. ಖಾರ, ಉಪ್ಪಿನ ಸವಿ ಎಲ್ಲೀ ತನಕ, ಸುಖ ದುಃಖದ ಭಾದೆ ಅಲ್ಲಿಯ ತನಕ. ವಾಚಾ ರಹಿತ, ಆಕಾರ ಮಹಾನ್, ಸಂತ ತುಕಾರಾಮ, ಕಲಾವಿದನ ದೃಷ್ಠಿ, ಈ ಕೃತಿಗಳನ್ನು ವೀಕ್ಷಿಸಿದಾಗ, ಶರೀರ ಶಾಸ್ತ್ರ ಅಭ್ಯಾಸದ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಕಾಣಬಹುದು.

ದೇವದಾಸ, ಮೈಕೆಲ್ ಎಂಜಲೋ, ಶ್ರೀ ಕೃಷ್ಣರಾವ್, ಶ್ರೀ ಕಲಾ ಮಹರ್ಷಿ ಬಾಬುರಾವ್ ಪೇಂಟರ್, ಶ್ರೀ ಅಬಾಲಾಲ್, ಶ್ರೀ ಮಾಧವರಾವ ಬಾಗಲ್, ಎಂ. ಜಿ. ಲೋಹಿಯಾ, ಶ್ರೀ ಎಸ್. ಎಂ. ಪಂಡಿತ್, ಶ್ರೀ ಶಾಮಕಾಂತ್ ಜಾಧವ, ರಾಜಾ ರವಿವರ್ಮ ಮುಂತಾದವರ ಭಾವಚಿತ್ರಗಳನ್ನು ಜಲವರ್ಣ, ತೈಲವರ್ಣ, ಪೆನ್ಸಿಲ್ ಮುಂತಾದ ಮಾಧ್ಯಮದಲ್ಲಿ ರಚಿಸಿದ್ದಾರೆ. ನೈಫ್ ಬಳಸಿ ರಚಿಸಿದ ಕೆಲವು ಭಾವಚಿತ್ರಗಳು ವಿಶಿಷ್ಠ ಮೈವಳಿಕೆಯನ್ನು ಪಡೆದಿವೆ. ಭಾವಚಿತ್ರ ರಚನೆಯಲ್ಲಿ ಅವರ ಪ್ರೌಢಿಮೆಯನ್ನು ಗುರುತಿಸಬಹುದು. ತಮ್ಮ ತಂದೆಯವರ ಭಾವಚಿತ್ರ ಹಾಗೂ ಸ್ವಭಾವ ಚಿತ್ರಗಳನ್ನು ಸಹ ರಚಿಸಿದ್ದಾರೆ.

ಅಪ್ಪಾಸಾಹೇಬರ ಒಟ್ಟಾರೆ ವರ್ಣಚಿತ್ರಗಳನ್ನು ಭಾವಚಿತ್ರಗಳು, ವ್ಯಕ್ತಿಚಿತ್ರಗಳು, ನಿಸರ್ಗಚಿತ್ರಗಳು, ಸಂಯೋಜನಾ ಚಿತ್ರಗಳು, ಪೌರಾಣಿಕ ಚಿತ್ರಗಳು, ಧಾರ್ಮಿಕ ಚಿತ್ರಗಳು, ಸಾಮಾಜಿಕ ಚಿತ್ರಗಳು, ಭಿತ್ತಿ ಚಿತ್ರಗಳು ಎಂದು ವರ್ಗೀಕರಿಸಬಹುದು. ಅಪ್ಪಾಸಾಹೇಬರ ವರ್ಣಚಿತ್ರಗಳನ್ನು ನೋಡಿ "ಒಬ್ಬ ಅದ್ಭುತ ವಾಗ್ಮೀಯ ಆಧ್ಯಾತ್ಮಿಕ ಪ್ರವಚನದಲ್ಲಿ ಅಗೋಚರವಾಗಿ ಅನುಭವಿಸುವ ಸುಖ, ನಿಮ್ಮ ಆಧ್ಯಾತ್ಮಿಕ ಚಿತ್ರಗಳಲ್ಲಿ ಪ್ರತ್ಯಕ್ಷವಾಗಿ ಅನುಭವಿಸುವುದನ್ನು ನಿಮ್ಮ ಚಿತ್ರಗಳಲ್ಲಿ

ಕಾಣುತ್ತೇವೆ. ಹೀಗಾಗಿ ನಿಮ್ಮ ಕಲೆ ಮಹತ್ವಪೂರ್ಣವಾದುದು" ಎಂದು ಚಿಂಚಣಿಯ ಅಲ್ಲಮಪ್ರಭು ಮಹಾಸ್ವಾಮಿಗಳು ಅಭಿಪ್ರಾಯಪಟ್ಟಿದ್ದಾರೆ.

ಜಲವರ್ಣ :

ಎಸ್. ಕಾಡಾಪೂರಕರ ಅವರು ಜಲವರ್ಣ ಬಳಸುವುದರಲ್ಲಿಯೂ ತಮ್ಮದೇ ಆದ ಶೈಲಿಯನ್ನು ಕಂಡುಕೊಂಡಿದ್ದಾರೆ. ಜಲವರ್ಣ ಬಳಸುವ ವಿಧಾನ, ವರ್ಣಗಳ ತಾಜಾತನ ಕಾಯ್ದುಕೊಳ್ಳುವಿಕೆ, ಕತ್ತಲೆ ಹಾಗೂ ಬೆಳಕಿನ ಭಾಗದ ನಿರ್ವಹಣೆಯಲ್ಲಿ ಅವರು ತೋರಿದ ಜಾಣ್ಮೆಯನ್ನು ಅವರ ಕೃತಿಗಳಾದ ಲೈಫ್, ಪೇಂಟಂಗ್, ಕಲಾವಿದರ ತಂದೆ-ತಾಯಿಯವರ ವ್ಯಕ್ತಿ ಚಿತ್ರಗಳು, ಜಲವರ್ಣದಲ್ಲಿಯ ಸಂಯೋಜನಾ ಚಿತ್ರಗಳು ಮುಂತಾದ ಕೃತಿಗಳನ್ನು ಗಮನಿಸಬಹುದು.

ಪೋಸ್ಟರ್ ವರ್ಣ :

ಖ್ಯಾತ ಕಲಾವಿದ ಎಸ್. ಎಂ. ಪಂಡಿತ ಅವರ ಪೋಸ್ಟರ್ ಬಣ್ಣದ ಕೃತಿಗಳಿಂದ ಆಕರ್ಷಿತರಾಗಿ, ಈ ಮಾಧ್ಯಮದಲ್ಲಿಯೂ ಅವರು ಕೃತಿಗಳನ್ನು ರಚಿಸಿದ್ದಾರೆ. ಅಪಾರದರ್ಶಕವಾದ ಪೋಸ್ಟರ್ ಮಾಧ್ಯಮದಲ್ಲಿ ಕೃತಿಗಳನ್ನು ರಚಿಸಬೇಕಾದರೆ ಸಾಕಷ್ಟು ಅಭ್ಯಾಸ, ಅನುಭವ ಬೇಕಾಗುತ್ತದೆ. ವಿಶ್ವಕರ್ಮ, ಬಾಲ್ಯ, ಯೌವನ, ಮುಪ್ಪು, ದುಃಖ, ಬುದ್ಧ ಮುಂತಾದ ಕೃತಿಗಳು ಪೋಸ್ಟರ್ ಬಣ್ಣದಲ್ಲಿ ರಚಿಸಿದ ಕೃತಿಗಳಲ್ಲಿ ಮುಖ್ಯವಾಗಿವೆ.

ತೈಲವರ್ಣ :

ಕಾಡಾಪೂರಕರ ಅವರು ಜಲವರ್ಣ, ಪೋಸ್ಟರ್ ವರ್ಣಗಳಂತೆ ತೈಲವರ್ಣದಲ್ಲಿ ತಮ್ಮದೇ ಆದ ಶೈಲಿಯನ್ನು ಕಂಡುಕೊಂಡು, ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಕೊಲ್ಹಾಪೂರ ಸಕ್ಕರೆ ಕಾರ್ಖಾನೆಯ ಮುಖ್ಯಸ್ಥರಾದ ಶ್ರೀ ಎಂ. ಬಿ. ಲೋಹಿಯಾ ಅವರ ಸಂಗ್ರಹದಲ್ಲಿರುವ ಕೃತಿಗಳು. ಅಲ್ಲದೆ ತಾರಾರಾಣಿ ವಿದ್ಯಾಪೀಠ ಕೊಲ್ಹಾಪೂರ ಸಂಗ್ರಹದಲ್ಲಿರುವ ಕೃತಿಗಳಲ್ಲಿ ಮುಖ್ಯವಾಗಿ, ಸುವರ್ಣ ತುಲಾ 2'x3', ತುಳಜಾ ಭವಾನಿ 2'x3', ರಾಜ್ಯಾಭಿಷೇಕ್ 2'x3', ಶಿವಾಜಿ ಶಪಥ 2'x3', ಶಿವಾಜಿ ಮಹಾರಾಜರ ಸಮಾಧಿ 2'x3', ದ್ವಾರಪಾಲಕ 2'x3' ಅಳತೆಯಲ್ಲಿರುವ ತೈಲವರ್ಣ ಕೃತಿಗಳು ಹಾಗೂ ಅವರ ಇನ್ನು ಹಲವಾರು ಕೃತಿಗಳನ್ನು ಗಮನಿಸಿದಾಗ, ತೈಲವರ್ಣದ ಮೇಲಿನ ಅವರ ಹಿಡಿತವನ್ನು ಗುರುತಿಸಬಹುದಾಗಿದೆ.

ಕೊಲ್ಹಾಪೂರ ಶುಗರ್ ಫ್ಯಾಕ್ಟರಿಗೆ, ತಾರಾ ರಾಣಿ. ವಿದ್ಯಾಪೀಠ, ವಿಶ್ವವಿದ್ಯಾಲಯ ಕೊಲ್ಹಾಪೂರಕ್ಕೆ ಸಾಕಷ್ಟು ವರ್ಣ ಚಿತ್ರಗಳನ್ನು ತಯಾರಿಸಿ ಕೊಟ್ಟಿದ್ದಾರೆ. ಅಲ್ಲದೆ ಆಲಖನೂರಿನ ಕರಿಸಿದ್ಧೇಶ್ವರ ಗುಡಿ, ಕಾಡಾಪೂರ ಹಾಗೂ ರಾಯಬಾಗ್, ಚಿಕ್ಕೋಡಿ ಹಾಗೂ ನಿಪ್ಪಾಣಿಯ ಗುಡಿ ಗುಂಡಾರಗಳಿಗೆ, ಮಠಗಳಿಗೆ ಭಿತ್ತಿಚಿತ್ರ ತಯಾರಿಸಿದ್ದಾರೆ. ಜೀವನ ಕಲ್ಯಾಣ ನಾಟ್ಯ ಸಂಘ ಕೊಲ್ಹಾಪೂರ, ಏಣಗಿ ಬಾಳಪ್ಪನವರ ನಾಟಕ ಕಂಪನಿ, ಹೀಗೆ ಕರ್ನಾಟಕ, ಮಹಾರಾಷ್ಟ್ರದ ಅನೇಕ ನಾಟಕ ಕಂಪನಿಗಳಿಗೆ, ನಾಟಕ ಪರದೆ ಸಾಂದರ್ಭಿಕ ಚಿತ್ರಗಳನ್ನು ತೈಲವರ್ಣದಲ್ಲಿ ರಚಿಸಿಕೊಟ್ಟಿದ್ದಾರೆ. ಶಿವಕಾಶಿಯ ಆಫ್‌ಸೆಟ್ ಪ್ರಿಂಟರ್ಸ್ ರವರಿಗಾಗಿಯೂ ಸಾಕಷ್ಟು ಕೃತಿಗಳನ್ನು ರಚಿಸಿಕೊಟ್ಟಿದ್ದಾರೆ.

ಕಲಾವಿದ ಎಸ್. ಅಪ್ಪಾಸಾಹೇಬ ಕಾಡಾಪೂರಕರ ಅವರು ಜಲವರ್ಣ, ತೈಲವರ್ಣ, ಪೋಸ್ಟರ್ ವರ್ಣ ಹೀಗೆ ವಿವಿಧ ಮಾಧ್ಯಮಗಳಲ್ಲಿ ಕೆಲಸ ಮಾಡಿ, ಆಯಾ ಮಾಧ್ಯಮದ ಮೇಲೆ ಹಿಡಿತವನ್ನು ಸಾಧಿಸಿದ್ದಾರೆ. ಪಾಶ್ಚಾತ್ಯ ಶೈಲಿಯಾದ 'ಪಾಯಿಂಟಲಿಜಂ' ಪ್ರಭಾವದಿಂದ ನೈಫ್ ಬಳಸಿ ಅನೇಕ ಭಾವಚಿತ್ರಗಳನ್ನು ರಚಿಸಿದ್ದಾರೆ. ತೈಲವರ್ಣದ ಬಣ್ಣಗಳನ್ನು ನೈಫ್‌ನಿಂದ ಒಂದರ ಪಕ್ಕದಲ್ಲಿ ಇನ್ನೊಂದು ಬಣ್ಣವನ್ನು ನೇರವಾಗಿ ಇಡುತ್ತಾ ವಿಶೇಷವಾದ ವ್ಯವಳಿಕೆಯನ್ನು ತಂದಿದ್ದಾರೆ. ಇದರಿಂದ ಬಣ್ಣಗಳ ತಾಜಾತನ ಹಾಗೆ ಉಳಿದು ಕೃತಿಗಳಲ್ಲಿ ಜೀವಂತಿಕೆ ಕಂಗೊಳಿಸುತ್ತದೆ.

ಪ್ರಾಚೀನ ಕಾಲದಿಂದಲೂ ಕಲಾವಿದ ಪ್ರಕೃತಿಯನ್ನು ಅನುಕರಣೆ ಮಾಡಿಕೊಂಡು ಚಿತ್ರಿಸುತ್ತಾ ಬಂದಿದ್ದಾನೆ. ಪ್ರಕೃತಿಯ ಚಲನವಲನ, ನೆರಳು ಬೆಳಕಿನ ಆಟವನ್ನು, ನಿಸರ್ಗ ಸೌಂದರ್ಯದ ಕ್ಷಣಗಳನ್ನು ಚಿತ್ರಿಸುತ್ತಾ ಕಲಾವಿದ ತನ್ನದೇ ಆದ ಒಂದು ಶೈಲಿಯನ್ನು ಕಂಡುಕೊಳ್ಳಲು ಎಷ್ಟೋ ವರ್ಷಗಳ ಸತತ ಪ್ರಯತ್ನದಿಂದ ಒಂದು ಶೈಲಿಯನ್ನು ತನ್ನದಾಗಿಸಿಕೊಂಡು ಅದೇ ಮಾರ್ಗದಲ್ಲಿ ಮುಂದುವರೆದಿರುತ್ತಾರೆ. ಆದರೆ ಎಸ್. ಕಾಡಾಪೂರಕರ ಅವರ ಕೃತಿಗಳನ್ನು ವಿಮರ್ಶಿಸಿದಾಗ, ಅವರು ಒಂದೇ ಶೈಲಿಗೆ ಅಂಟಿಕೊಂಡು ಕೃತಿಗಳನ್ನು ರಚಿಸಿಲ್ಲ. ಕಲಾ ಇತಿಹಾಸದಲ್ಲಿ ಇಲ್ಲಿಯವರೆಗೆ ಅನೇಕ ಶೈಲಿ (ISM) ಗಳು ಬಂದು ಹೋಗಿದ್ದರು, ಆ ಯಾವುದೇ 'ಇಸಂ'ಗಳ ಬಗ್ಗೆ ಸೆಳೆತವಾಗಲಿ, ಅವಜ್ಞೆಯಾಗಲಿ ಅವರಿಗಿಲ್ಲ. ಜನರು ಮೆಚ್ಚುವ ರೀತಿಯಲ್ಲಿ ಕೃತಿ ರಚಿಸಿದ್ದಾರೆ. ಸಹೃದಯನಿಗೆ ಆನಂದ ನೀಡುವುದು ಇವರ ಉದ್ದೇಶವಾಗಿದೆ.

ಇವರ ಕೃತಿಗಳು ದೇಶ ವಿದೇಶಗಳ ಅನೇಕ ಸರಕಾರಿ ಸಂಗ್ರಹಗಳಲ್ಲಿ, ಖಾಸಗಿಯವರ ಸಂಗ್ರಹಗಳಲ್ಲಿ ಇವೆ. ಇವರ ಎಲ್ಲ ವರ್ಣಚಿತ್ರಗಳ ಬಗ್ಗೆ ಸಂಶೋಧನೆ ನಡೆದು, ಹರಡಿ ಹಂಚಿಹೋದ ಇವರ ಕೃತಿಗಳ ಸಮಗ್ರ ಅಧ್ಯಯನ ಇನ್ನೂ ವ್ಯಾಪಕವಾಗಿ ನಡೆಯಬೇಕಿದೆ.

ಶಿಲ್ಪ ಕಲಾಕೃತಿಗಳು :

ಕಾಡಾಪೂರಕರ ಅವರು ವಿಶ್ವಕರ್ಮ ಮನೆತನದವರಾಗಿದ್ದರಿಂದ ಶಿಲ್ಪಕಲೆ ಸಹಜವಾಗಿ ಬಂದಿದೆ. ಮನೆತನದ ವೃತ್ತಿ 'ಪತ್ತಾರಿಕೆ'ಯಾಗಿತ್ತು. ಅದೇ ಮುಂದುವರೆದು ಇವರು ಶಿಲ್ಪಗಳನ್ನು ರಚಿಸಲು ನೆರವಾಯಿತು. ಆದರೆ ಕಾಡಾಪೂರಕರರು ಆಭರಣಗಳ ತಯಾರಿಕೆಗೆ ಗಮನ ಕೊಡದೇ ಶಿಲ್ಪಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಚಿಕ್ಕಂದಿನಲ್ಲಿ ಚಿತ್ರಕಲೆಯಲ್ಲಿ ಆಸಕ್ತಿ ವಹಿಸಿದ ಇವರು ನಂತರದ ದಿನಗಳಲ್ಲಿ ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ, ಘನ್‌ಮೆಟಲ್ ಮುಂತಾದ ಲೋಹಗಳನ್ನು ಬಳಸಿ ಎರಕ ಹೊಯ್ದು ಶಿಲ್ಪಗಳನ್ನು ತಯಾರಿಸುವುದನ್ನು ಕರಗತ ಮಾಡಿಕೊಂಡರು. ಅಲ್ಲದೆ ಕಲ್ಲು, ಮಣ್ಣು, ಕಟ್ಟಿಗೆ, ಸಿಮೆಂಟ್, ಪ್ಲಾಸ್ಟರ್ ಆಫ್ ಪ್ಯಾರಿಸ್, ಮೇಣದಿಂದಲೂ ಶಿಲ್ಪಗಳನ್ನು ರಚಿಸಿದರು.

ಅಪ್ಪಾಸಾಹೇಬರವರಿಗೆ ಶಿಲ್ಪಕಲೆಯ ಮೊದಲ ಗುರು ಅವರ ಅಜ್ಜಿ ಸಕ್ಕೂಬಾಯಿ. ಇವರು ಪ್ರತಿವರ್ಷ ಗಣೇಶ ಹಬ್ಬಕ್ಕೆ 100 ರಿಂದ 150 ಗಣಪತಿ ಮೂರ್ತಿಗಳನ್ನು ಮಾಡುತ್ತಿದ್ದರು. ಬಾಲಕ ಅಪ್ಪಾಸಾಹೇಬರು ಆಗ ಇಲಿಗಳನ್ನು ಮಣ್ಣಿನಿಂದ ಮಾಡಿಕೊಡುತ್ತಿದ್ದರು. ಬಳಿಕ ಗಣಪತಿಯ ಕೈಗಳನ್ನು ಮಾಡಿದರು. ನಂತರ ಸಣ್ಣ ಸಣ್ಣ ಗಣಪತಿಯನ್ನು ಮಣ್ಣಿನಲ್ಲಿ ಮಾಡಲು ಪ್ರಾರಂಭಿಸಿದರು. ಸಕ್ಕೂಬಾಯಿಯವರು ತೀರಿಕೊಂಡ ಮೇಲೆ ಗಣಪತಿ ಮಾಡುವ ಕೆಲಸವನ್ನು ಇವರ ತಾಯಿ ಮಾಡುತ್ತಿದ್ದರು. ಇವರ ನಂತರ ಈಗ ಕಾಡಾಪೂರದಲ್ಲಿ ಇವರ ತಮ್ಮನ ಹೆಂಡತಿ ಶ್ರೀಮತಿ ಕಾಳವ್ವನವರು ಮಾಡುತ್ತಿದ್ದಾರೆ. ಹೀಗೆ ಗಣೇಶನಿಂದ ಪ್ರಾರಂಭವಾದ ಇವರ ಮೂರ್ತಿ ತಯಾರಿಕೆಯ ಕೆಲಸ ನಿರಂತರವಾಗಿ ಮುಂದುವರೆದಿದೆ.

ಅಪ್ಪಾಸಾಹೇಬ ಅವರು ಗಣೇಶನ ಉತ್ಸವಕ್ಕೆ ಸಾಕಷ್ಟು ಮಣ್ಣಿನ ಹಾಗೂ ಪ್ಲಾಸ್ಟರ್ ಮೂರ್ತಿಗಳನ್ನು ಮಾಡಿಕೊಟ್ಟಿದ್ದಾರೆ. ಗಣೇಶ ಮೂರ್ತಿ ಮಾಡುವಾಗ ಮೊದಲು ಚೆನ್ನಾಗಿ ಸ್ಕೇಚ್ ಮಾಡಿಕೊಳ್ಳುತ್ತಿದ್ದರು. ನಂತರ ಮಣ್ಣಿನ ಮೂರ್ತಿ ತಯಾರಿಸಿಕೊಳ್ಳುತ್ತಿದ್ದರು. ಅದೇ ಅಳತೆಯಲ್ಲಿ ಮೇಣದಿಂದ ಕರಡು ರೂಪ

ತಯಾರಿಸುತ್ತಾರೆ. ನಂತರ ಬೆಳ್ಳಿ ಅಥವಾ ಬೇಕಾದ ಲೋಹದ ಎರಕ ಹೊಯ್ದು ಶಿಲ್ಪ ತಯಾರಿಸುತ್ತಾರೆ. ಈ ರೀತಿಯಲ್ಲಿ ಬೆಳ್ಳಿಯ ಗಣೇಶ ಮೂರ್ತಿಗಳನ್ನು ಬೇಕಾದಷ್ಟು ತಯಾರಿಸಿದ್ದಾರೆ.

ಬೆಳ್ಳಿ ಎರಕ ಹೊಯ್ದ ಇವರ ಇನ್ನೊಂದು ಶಿಲ್ಪದ ಹೆಸರು 'ಪರ ಬ್ರಹ್ಮ' 11.15" ಎತ್ತರವಾಗಿದೆ. ಜಾನಪದ ಶೈಲಿಯ ಈ ಮೂರ್ತಿ ಆಕರ್ಷಕವಾಗಿದೆ. ಕಣ್ಣು, ಮೂಗು, ಮೀಸೆ, ಬಾಯಿ, ಆಭರಣಗಳು ಜಾನಪದ ಶೈಲಿಯಲ್ಲಿ ಕೆತ್ತನೆ ಮಾಡಿದ್ದಾರೆ. ಮೂರ್ತಿಯ ಕೆಳಗೆ ಕಮಲದ ಹೂವಿನ ಪೀಠವಿದೆ.

ಮಹಾರಾಷ್ಟ್ರದ ಖ್ಯಾತ ಕಲಾವಿದರಾದ ಶ್ರೀ ಬಾಬುರಾವ್ ಪೇಂಟರರವರ ಕಡೆಗೆ ಕೊಲ್ಹಾಪೂರಕ್ಕೆ ನಮ್ಮ ತಂದೆಯವರು ನನ್ನನ್ನು ಕರೆದುಕೊಂಡು ಹೋಗಿದ್ದರು. ಆಗ ಕಲಾವಿದ ಬಾಬುರಾವ್‌ರವರು ವ್ಯಾಕ್ಸ್‌ನಲ್ಲಿ ಮಹಾತ್ಮ ಗಾಂಧೀಜಿಯವರ ಮೂರ್ತಿಯನ್ನು ಮಾಡುತ್ತಿದ್ದರು. ಆಗ ನಮ್ಮ ತಂದೆಯವರು ಶ್ರೀ ಬಾಬುರಾವ್ ಪೇಂಟರ್‌ಗೆ ನನ್ನನ್ನು ಪರಿಚಯಿಸಿ, ನಾನು ಚಿತ್ರ ತೆಗೆಯುವ ವಿಷಯ ಅವರಿಗೆ ತಿಳಿಸಿದರು. 'ಇವನಿಗೆ ನಿಮ್ಮ ಆಶೀರ್ವಾದವಾಗಬೇಕು' ಎಂದು ಕೇಳಿಕೊಂಡರು. ಆಗ ಬಾಬುರಾವ್ ಪೇಂಟರ್‌ರವರು ನನ್ನನ್ನು ಆಶೀರ್ವದಿಸಿ, ತಮ್ಮಲ್ಲಿಯ ಮೇಣದ ಮುದ್ದೆಯನ್ನು ನನಗೆ ಆಶೀರ್ವಾದವಾಗಿ ನೀಡಿದರು. ಮುಂದೆ ತುಂಬಾ ದಿನಗಳ ನಂತರ 'ಸಯಿದಾ' ಅನ್ನುವ ಸೈನಿಕ ಮಿಲಿಟರಿಯಲ್ಲಿ ತೀರಿಕೊಂಡಿದ್ದನು. ಅವರ ತಾಯಿಗೆ ನಾನು ಕಲಾವಿದನೆಂಬುದು ತಿಳಿದಿತ್ತು. ನನ್ನ ಹತ್ತಿರ ಬಂದು "ನನ್ನ ಮಗ ಮಿಲಿಟರಿಯಲ್ಲಿ ಹುತಾತ್ಮನಾಗಿದ್ದಾನೆ. ಅದಕ್ಕಾಗಿ ಅವನ ನೆನಪಿಗಾಗಿ ನಾನು ಅವನ ಸ್ಮಾರಕ ನಿರ್ಮಿಸಬೇಕೆಂದಿದ್ದೇನೆ. ಹಣ ಎಷ್ಟೇ ಖರ್ಚಾದರೂ ಸರಿ ಎಂದು ಅವನ ಕಂಚಿನ ಮೂರ್ತಿ ಮಾಡಲು ಹೇಳಿದರು. ಆಗ ನಾನು ಸಯಿದಾ ಸೈನಿಕನ ಮೂರ್ತಿಯನ್ನು ಮೊದಲು ಮಣ್ಣಿನಲ್ಲಿ ಮಾಡಿದೆ. ನಂತರ ಮೇಣದಲ್ಲಿ, ಆಮೇಲೆ ಘನ ಮೆಟಲ್‌ದಿಂದ ಎರಕ ಹೊಯ್ದು ಕೊಟ್ಟೆನು. ಈ ಮೂರ್ತಿ ಮಾಡುವಾಗ ಅಂದು ಶ್ರೀ ಬಾಬುರಾವ್ ರವರು ಕೊಟ್ಟ ಮೇಣ ನನಗೆ ಆಶೀರ್ವಾದ ರೂಪದಲ್ಲಿ ಉಪಯೋಗವಾಯಿತು" ಎಂದು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ. ನಂತರದಲ್ಲಿ ಅವರು ಅನೇಕ ಲೋಹದ ಭಾವ ಶಿಲ್ಪಗಳನ್ನು ರಚಿಸಿದ್ದಾರೆ. ಹೀಗೆ ಅಪ್ಪಾಸಾಹೇಬರವರ ತಂದೆಯವರು ಇವರನ್ನು ಬಾಬುರಾವ್ ಪೇಂಟರ್ ಅವರಲ್ಲದೆ ರಾಜಾಪೂರ ಪತ್ತಾರ, ದುರದುಂಡಿ ಪತ್ತಾರ, ಬಾಂಬೆಯ ಜೆ. ಜೆ. ಸ್ಕೂಲ್‌ನಲ್ಲಿ ಕಾಸ್ಟಿಂಗ್ ಎಂಬೋಸಿಂಗ್

ಬಗ್ಗೆ ಉಪನ್ಯಾಸಕರಾಗಿದ್ದ ಬೆಳಗಾವಿಯ ಶ್ರೀ ನಾಗಪ್ಪ ಸಾಬಣ್ಣವರ ಅವರ ಹತ್ತಿರ ಕರೆದುಕೊಂಡು ಹೋಗಿ, ಶಿಲ್ಪಕಲೆಯ ಬಗ್ಗೆ ಹೆಚ್ಚಿನ ಜ್ಞಾನ ಒದಗಿಸಿದರು.

ನಿಪ್ಪಾಣಿಯ ಜೈನ ಸಮಾಜದ ಪಂಚಕಲ್ಯಾಣ ಮಹೋತ್ಸವ ನಿಮಿತ್ತ ಮನೋಜ್ಞ ಮಾನಸ್ತಂಭಕ್ಕಾಗಿ 'ಮಾರ್ಬಲ್‌ನಲ್ಲಿ ಗೊಮ್ಮಟೇಶ್ವರ ಮೂರ್ತಿ ಮಾಡಿಕೊಟ್ಟಿದ್ದಾರೆ. ಪತ್ರಿಕೆಯಲ್ಲಿ ಅದರ ವಿಮರ್ಶೆ "ಪ್ರಸಿದ್ಧ ಕಲಾಕಾರ ಶ್ರೀ ಅಪ್ಪಾಸಾಹೇಬ ಕಾಡಾಪೂರಕರ ಯಾಂನಿ ಭ 1008 ಆದಿನಾಥಾಂಚೀ ಸುಂದರ ಸಂಗಮವಾರೀ ಮೂರ್ತಿ ತಯಾರ ಕೆಲೀ, ಆಹೆ, ಶ್ರೀ ಅಪ್ರತಿಮ ಜಾಲೀ ಆಹೆ" ಎಂದು ಬರೆದಿದ್ದಾರೆ. ಹೀಗೆ ಇನ್ನೂ ಅನೇಕ ಭಾವಶಿಲ್ಪಗಳನ್ನು ಕಲ್ಲಿನಲ್ಲಿ ರಚಿಸಿಕೊಟ್ಟಿದ್ದಾರೆ.

ಛತ್ರಪತಿ ಶಿವಾಜಿ ಮಹಾರಾಜನು ಕುದುರೆ ಏರಿ ಕುಳಿತಿದ್ದಾರೆ. ಒಂದು ಕೈಯಲ್ಲಿ ಕತ್ತಿಯನ್ನು ಎತ್ತಿದ್ದಾರೆ. ಇನ್ನೊಂದು ಕೈಯಲ್ಲಿ ಲಗಾಮು ಹಿಡಿದಿದ್ದಾರೆ. ಲಗಾಮು ಜಗ್ಗಿದ ರಭಸಕ್ಕೆ ಕುದುರೆಮುಖ ಕೆಳಗೆ ಮಾಡಿ ಎರಡು ಮುಂಗಾಲುಗಳನ್ನು ಎತ್ತಿದೆ. ಎರಡು ಹಿಂಗಾಲುಗಳ ಮೇಲೆ ಭಾರ ಹಾಕಿ ಮೇಲಕ್ಕೆ ಜಿಗಿದಂತಿದೆ. ಈ ಮೂರ್ತಿ ಘನ್‌ಮೆಟಲ್‌ನಲ್ಲಿ ಎರಕಹೊಯ್ದು ರಚಿಸಿದ್ದಾರೆ. ಈ ಮೂರ್ತಿಯು 14ನೇ ಮರಾಠ ಫಲ್ಟನ್ ಮಿಲಿಟರಿ ಸಂಗ್ರಹದಲ್ಲಿದೆ.

ವೀರ ರಾಣಿ ಕಿತ್ತೂರ ಚೆನ್ನಮ್ಮಳ ಮೂರ್ತಿಯನ್ನು ಘನ್‌ಮೆಟಲ್ ಕಾಸ್ಟಿಂಗ್‌ನಲ್ಲಿ ಮಾಡಿದ್ದಾರೆ. ಇದು ಟೇಬಲ್ ಸ್ಟ್ಯಾಚ್ಯೂ ಅಳತೆಯದ್ದು 1 ಅಡಿ ಫೂಟ ಎತ್ತರವಿದೆ. ಚೆನ್ನಮ್ಮ ಬಲಗೈಯಲ್ಲಿ ಖಡ್ಗವನ್ನು ಜಳಪಿಸಿ ಎಡಗೈಯಿಂದ ಕುದುರೆ ಲಗಾಮು ಹಿಡಿದಿದ್ದಾಳೆ. ಹಿಂಗಾಲುಗಳ ಮೇಲೆ ಭಾರ ಹಾಕಿ ಕುದುರೆ ಮೇಲಕ್ಕೆ ಜಿಗಿದಿದೆ.

ಇದೇ ಮಾದರಿಯ ಇವರ ಇನ್ನೊಂದು ಘನ್‌ಮೆಟಲ್‌ನಲ್ಲಿ ಮಾಡಿದ ಮೂರ್ತಿ 'ತಾರಾ ರಾಣಿ'ಯದ್ದು. ತಾರಾರಾಣಿಯು ಕುದುರೆಯ ಮೇಲೆ ಕುಳಿತ ಸನ್ನಿವೇಶದ ಕಾಸ್ಟಿಂಗ್ ಶಿಲ್ಪವಾಗಿದೆ. ಇದು ಸಹ ಟೇಬಲ್ ಅಳತೆಯಲ್ಲಿದೆ. ಅಲ್ಯುಮಿನಿಯಂ ಕಾಸ್ಟಿಂಗ್ ಇವರು ಮಾಡಿದ ಮೂರ್ತಿ 'ಸಿಂಹ'ದ್ದಾಗಿದೆ. ಇದು ಮೈಸೂರು ಅರಮನೆಯ ಮುಂಭಾಗ ಸಿಂಹಗಳನ್ನು ನೋಡಿ, ಅದರ ಫೋಟೋಗ್ರಾಫ್ ಮಾಡಿಕೊಂಡು ಬಂದು ಅದೇ ಮಾದರಿಯಲ್ಲಿ ರಚಿಸಿದ್ದಾರೆ. ಇದು ಟೇಬಲ್ ಸ್ಟ್ಯಾಚ್ಯೂ ಆಗಿದ್ದು ಇದೇ ಮಾದರಿಯಲ್ಲಿ ಸಿಮೆಂಟ್‌ನಲ್ಲಿ ಮಾಡಿದ

ಶಿಲ್ಪ ದೊಡ್ಡದಾಗಿದೆ. ಈ ಮೂರ್ತಿಯನ್ನು ತಮ್ಮ ಮನೆಯ ಮುಂದೆ ಪ್ರತಿಷ್ಠಾಪಿಸಿದ್ದಾರೆ. ಅಲ್ಲದೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ತಯಾರಿಸಿದ 'ಶೀಲಾಬಾಲಕಿ' ಶಿಲ್ಪ, ಒತ್ತಾಳೆ ಕಾಸ್ಟಿಂಗ್‌ನಲ್ಲಿ ತಯಾರಿಸಿದ 'ಶ್ರೀ ಕೃಷ್ಣ' ಶಿಲ್ಪ, ಬೆಳ್ಳಿ ಕಾಸ್ಟಿಂಗ್‌ನಲ್ಲಿ ತಯಾರಿಸಿದ 'ಬಾಹುಬಲಿ' ಶಿಲ್ಪ ಮುಂತಾದ ಕಾಸ್ಟಿಂಗ್ ಅಪ್ಪಾಸಾಹೇಬರ ಅವರ ಶಿಲ್ಪಕಲಾ ಪರಿಣಿತಿಗೆ ಸಾಕ್ಷಿಯಾಗಿವೆ.

ಇವರು ವೈನ್ ಬಾಟಲ್‌ಗಳಿಗೆ ಕಾಸ್ಟಿಂಗ್ ಹಾಗೂ ಎಂಬೋಸಿಂಗ್ ಮೂರ್ತಿಗಳಿಂದ ಸಂಯೋಜಿಸಿ ಕಲಾವೌಲ್ಯ ತಂದಿದ್ದಾರೆ. ಕಟ್ಟಿಗೆಯಲ್ಲಿ ಮೂರ್ತಿಗಳನ್ನು ತಯಾರಿಸಿದ್ದಲ್ಲದೆ, ಸುಂದರವಾದ ಕುಸುರಿನ ಕೆಲಸ ಮಾಡಿದ್ದಾರೆ. ವೀಣೆ ಮುಂತಾದ ಮಾಡಲ್‌ಗಳನ್ನು ಸಹ ತಯಾರಿಸಿದ್ದಾರೆ. ಗಣೇಶ ಉತ್ಸವಕ್ಕೆ ಶ್ರೀ ಗಣೇಶ ಮೂರ್ತಿಗಳನ್ನು ತಯಾರಿಸಿದ್ದಲ್ಲದೆ, ಕಟ್ಟಿಗೆ, ಪ್ಲಾಸ್ಟರ್ ಆಫ್ ಪ್ಯಾರಿಸ್, ಇತರ ಕಚ್ಚಾ ವಸ್ತಗಳನ್ನು ಬಳಸಿ ಸುಂದರವಾದ ಗಣೇಶ ಮಂದಿರವನ್ನು ತಯಾರಿಸಿದ್ದಾರೆ. ಅಖಿಲ ಭಾರತ ದಸರಾ ವಸ್ತುಪ್ರದರ್ಶನದಲ್ಲಿ ಬೆಳಗಾವಿ ಜಿಲ್ಲೆಯನ್ನು ಪ್ರತಿನಿಧಿಸಿ ಆಕರ್ಷಕ ಸ್ತಬ್ಧ ಚಿತ್ರವನ್ನು ತಯಾರಿಸಿ, ಪ್ರದರ್ಶಿಸಿದ್ದಾರೆ. 18" ಮರಾಲ್-ಕಾಸ್ಟಿಂಗ್ ಕಟ್ಟಿಗೆಯ ದೇವಪಾಟ (ಸಿಂಹಾಸನ) ಹೀಗೆ ಕಟ್ಟಿಗೆಯಲ್ಲಿ ಸುಂದರ ಕುಸುರಿ ಕೆಲಸ ಮಾಡಿದ್ದಾರೆ.

ಉಬ್ಬೊತ್ತು ಕಲಾಕೃತಿಗಳು (ಎಂಬೋಸಿಂಗ್ ಕಲಾಕೃತಿಗಳು) :

ಎಂಬೋಸಿಂಗ್ ಅರ್ಥಾತ್ ಉಬ್ಬು ಶಿಲ್ಪ ಈ ಕೆತ್ತನೆ ಕೆಲಸವನ್ನು ಅಲ್ಯುಮಿನಿಯಂ, ಒತ್ತಾಳೆ, ತಾಮ್ರ, ಬೆಳ್ಳಿ, ಬಂಗಾರ ಮುಂತಾದ ಲೋಹದ ತಗಡನ್ನು ಬಳಸಿ ಎಂಬಾಸಿಂಗ್ ಕೃತಿಗಳನ್ನು ಮಾಡಲಾಗುತ್ತದೆ. ಪುರಾತನ ಕಾಲದಿಂದಲೂ ಗುಡಿಗಳ ಚೌಕಟ್ಟುಗಳಿಗೆ ದೇವರ ಮೂರ್ತಿ ತಯಾರಿಸಲು, ಸಿಂಹಾಸನ ಅಲಂಕಾರಿಕ ಪಾತ್ರೆಗಳನ್ನು ತಯಾರಿಸಲು, ಗೋಡೆ ಅಲಂಕರಣ ಸಲುವಾಗಿ ಇಲ್ಲವೆ ಕಲಾವಿದ ವೈಯಕ್ತಿಕ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಲು, ಕಲಾವಿದರು ಇಂಥ ಕಲಾಕೃತಿಯನ್ನು ಮಾಡುತ್ತಾ ಬಂದಿದ್ದಾರೆ.

"ಸಿದ್ಧಾರೂಢ ಮಠದಲ್ಲಿ ಸ್ವಯಂಚಿತ್ರ। ತಯಾರ ಮಾಡಿದ ಕಲಾಕಾರ
ಬಸವಾನಂದರ ಪ್ರಥಮ ಮಗ । ಅಪ್ಪಾಸಾಹೇಬ ಸಾಲಿಯವರಾ ।
ಹುಟ್ಟೂರ ಕಾಡಾಪೂರ ನಿಪ್ಪಾಣಿಯಲ್ಲಿದ್ದವರ । ಕರ್ಮನಿಷ್ಠವಂತರ
ಬೆಳ್ಳಿ, ಬಂಗಾರ, ಕೆತ್ತನೆ ಕಲೆಯಲ್ಲಿ ನಿಪುಣರಾ ।
ಜಗತ್ತಿನ ತುಂಬ ಕಲಾ ಬೀರಿದವರಾ ।"

ಅಪ್ಪಾಸಾಹೇಬರ ತಮ್ಮನವರಾದ ಪೂರ್ಣಾನಂದ ಸ್ವಾಮಿಗಳು ಅಣ್ಣನ ಚಿತ್ರಕಲೆಯ ಸಾಧನೆಯನ್ನು ಲಾವಣಿಯ ಮೂಲಕ ತಿಳಿಸಿದ್ದಾರೆ. ಲಾವಣಿಯಲ್ಲಿ ತಿಳಿಸಿದಂತೆ ಅಪ್ಪಾಸಾಹೇಬರ ಅವರ ಉಬ್ಬು ಕೆತ್ತನೆ ಕೆಲಸಗಳು, ಬೆಳ್ಳಿ, ಬಂಗಾರ, ಹಿತ್ತಾಳೆ, ತಾಮ್ರ ಮುಂತಾದ ಲೋಹಗಳ ಮೇಲೆ ಕೆಲಸ ಮಾಡಿದ್ದಾರೆ. ಇವರ ಇಂಥ ಉಬ್ಬು ಕೆತ್ತನೆ ಕೆಲಸಗಳು ದೇಶದ ವಿವಿಧ ಕಡೆ ಸಂಗ್ರಹಗೊಂಡಿವೆ. ಎಸ್. ಅಪ್ಪಾಸಾಹೇಬ ಬ. ಕಾಡಾಪೂರಕರರವರ ಎಂಬಾಸಿಂಗ್ ಕೃತಿಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಳ್ಳಲಾಗಿದೆ.

*** ಸೃಜನಶೀಲ ಸಂಯೋಜನಾ ಕೃತಿಗಳು :**

ದೇವರು, ಮಾನವಾಕೃತಿಗಳು, ಪ್ರಾಣಿ ಪಕ್ಷಿಗಳ ಎಂಬೋಸಿಂಗ್ ಕೃತಿಗಳು * ಪಲ್ಲಕ್ಕಿ, ಸಿಂಹಾಸನ, ಕಿರೀಟಗಳು * ತೊಟ್ಟಿಲು, ಮಣಿ, (ಕೂಡ್ರುಮಣಿ) ಚೌಕಟ್ಟುಗಳು * ಫ್ರೇಂಗಳು, ತೋರಣ, ದೇವರ ಮುಖಗಳು * ನಂದಾದೀಪ, ತ್ರಿಶೂಲ, ಟ್ರೇ ಮುಂತಾದ ಅಲಂಕಾರಿಕ ವಸ್ತುಗಳು * ಅಲ್ಲದೆ ವಿವಿಧ ಸಂಸ್ಥೆ, ಕಂಪನಿಗಳ ಹೆಸರಿನ ಚಿಹ್ನೆಗಳು. ಹೀಗೆ ಇವರು ವಿವಿಧ ಲೋಹಗಳನ್ನು ಉಪಯೋಗಿಸಿ ತಮ್ಮ ಸೃಜನಶೀಲ ಅಭಿವ್ಯಕ್ತಿಗಾಗಿ ಅಲ್ಲದೆ, ಜನರು, ಗ್ರಾಹಕ, ಕಲಾಸಕ್ತ, ಬಯಸಿದಂತೆ ಎಂಬೋಸಿಂಗ್ ಕೃತಿಗಳನ್ನು ಮಾಡಿದ್ದಾರೆ.

ಸೃಜನಶೀಲ ಸಂಯೋಜನಾ ಕೃತಿಗಳು :

ಎಸ್. ಅಪ್ಪಾಸಾಹೇಬರವರು ಅನೇಕ ವಿಷಯಗಳನ್ನು ಆಯ್ದುಕೊಂಡು, ತಾಮ್ರದ ತಗಡಿನ ಮೇಲೆ ತಮ್ಮ ಅಭಿವ್ಯಕ್ತಿಯನ್ನು ಸ್ಕೇಚ್ ರೂಪದಲ್ಲಿ ತಂದು, ನಂತರ ಅದನ್ನು ಉಬ್ಬು ಕೆತ್ತನೆ ಕೆಲಸ ಮಾಡಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ, 'ಮಹಾಸಭಾ' ಹಾಗೂ 'ವಾತ್ಸಲ್ಯ' ಕೃತಿ ಚೆನ್ನಾಗಿ ಮೂಡಿ ಬಂದಿವೆ.

*** ಮಹಾಸಭೆ :**

